UNIVERSAL LIBRARY
OU_200793
UNIVERSAL LIBRARY

*Printer :*

A. R. SHIVANAGAPPA,

*Proprietor :*

Vagvilas Book Depot Power Printing Press,

HUBLI.

1st Edition,

*Author & Publisher :*

S. P. GAONKAR, B. A.,

*The School Board, Administrative Officer,*

Hubli Municipal Borough,

HUBLI.

***Place of Publication :***

**HUBLI.**

**1933.**

# ಹುಬ್ಬಳ್ಳಿಯ ಕನ್ನಡ ಸಾಹಿತ್ಯ ಸಂಘದಿಂದ:-

ಶ್ರೀಯುತ **ಗಾಂವಕಾರ ಸಣ್ಣಪ್ಪನವರು 'ಮುಗಿಲು'** ಎಂಬ ತಮ್ಮ ಪದ್ಯಸಂಗ್ರಹವನ್ನು ನಮಗೆ ನಿವೇದಿಸಿರುವರು. ಅದನ್ನು ನಾವು ಮೊದಲಿನಿಂದಲೂ ಕೊನೆಯವರೆಗೆ ನೋಡಿದೆವು. ಕವಿತ್ವಕ್ಕೆ ಬೇಕಾದ ಭಾವಸಂಪತ್ತು ಮತ್ತು ವಾಕ್ಸಂಪತ್ತು ಈ ಪದಗಳಲ್ಲಿ ಒಡೆದು ಕಾಣುತ್ತದೆ. ಹೊಸದಾಗಿ ಇದು ಕವಿಗಳನ್ನು ಬರೆವ ಪದ್ಧತಿಯಿಂದ ಆರೈಸಲು ಈ ಪದ್ಯಗಳು ಕಾವ್ಯಮಯವಾಗಿವೆಂದು ನಾವು ಸಂದೇಹವಿಲ್ಲದೆ ಅನ್ನಬಲ್ಲೆವು. ನಮ್ಮ ಸಂಘ ಸಸಿಯು ಮೊದಲನೆಯ ದಳವಾಗಿ ಇದನ್ನು ಹೊರಪಡಿಸಲು ನಮಗೆ ಹೊಸ ಬಗೆಯ ಸಂತಸವೆನಿಸುತ್ತದೆ.

ಹುಬ್ಬಳ್ಳಿ
೬-೯-೧೯೩೩

**ಸಿದ್ಧರಾಮಪ್ಪ. ದು. ಪಾವಟೆ,**
ಅಧ್ಯಕ್ಷರು.

**ಗುರುಸಿದ್ದಪ್ಪ. ಮ. ಮಿರ್ಜಿ**
ಗೌರವ ಕಾರ್ಯದರ್ಶಿ.

# ಬಿನ್ನವಿ.

ಕನ್ನಡ ಸರಸತಿಯ ಅಡಿಗಳಿಗಾಗಿ ಹೂಮಾಲೆ ಇದು. ಹಸುಳೆತನದಿಂದಲೂ ತಾಯನುಡಿಯ ಭಕುತನು. ನನ್ನ ಹಸುಳೆತನದ ಅಧ್ಯಾಪಕರಾದ **ಶ್ರೀ ವಾಮನ ಸುಬ್ಬರಾಯ ಪಂಡಿತರು** ಇತಿಹಾಸದ ಪಾಠಗಳು ನೆನಪುಳಿಯಬೇಕೆಂದು ಸಣ್ಣ ಪದ್ಯಗಳಿಂದ ನಮ್ಮ ಪಾಠಗಳನ್ನು ಮನಸ್ಸಿನಲ್ಲಿ ಅಚ್ಚೊತ್ತುತ್ತಿದ್ದರು. ಅವರು ಸಂಭಾಜಿಯನ್ನು ಕುರಿತು ಹೇಳಿದ "ಕಲುಷ ಸ್ನೇಹದಿ ಕೆಟ್ಟನೈ ಶಿವಸುತಂ ದುಸ್ಸಂಗವೇ ಘಾತಕಂ" ಎಂಬ ಪದ್ಯದ ಚರಣವು ಈಗಲೂ ನೆನಪಿಗೆ ಬರುತ್ತದೆ. ಅವರ ಪದ್ಯಗಳನ್ನು ಕಂಡು ಹುಡುಗತನದಲ್ಲಿಯೇ ಹಾಡುಗಳನ್ನು ಹೇಳಬೇಕೆಂದು ಹವಣಿಸಿದೆ.

ಹುಡುಗತನದ ಓದಿನಲ್ಲಿಯೇ ಕನ್ನಡ ತಾಯಡಿಗೆ ನನ್ನ ಒಂದೆರಡು ನುಡಿಹೂವುಗಳನ್ನು ಇಟ್ಟೆನು. ಹುಡುಗತನವು ಮುಗಿಯಿತು ಆದರೆ ಆ ವಯಸ್ಸಿನ ಆನಂದ ವೃತ್ತಿಯು ಅಳಿಯಲಿಲ್ಲ. ಮುಂದಿರುವ ಸೃಷ್ಟಿ ಸೌಂದರ್ಯವನ್ನು ನಿರುಕಿಸುವ ನನ್ನ ಮನಸ್ಸು ಅದರ ಮರೆಯಲ್ಲಿರುವ ಪರಮಾತ್ಮನನ್ನು ಹುಡುಕಹತ್ತಿತು. ಅದರಿಂದ ನಾನು ಅಧ್ಯಾತ್ಮ ಗ್ರಂಥಗಳನ್ನು ಓದಹತ್ತಿದೆನು. ಸ್ವಾಮಿ ವಿವೇಕಾನಂದ, ರಾಮತೀರ್ಥ ಇವರ ಗ್ರಂಥಗಳು ಬೋಧಪ್ರದವಾಗಿರುವವೆಂದು ಕೇಳಿ ಅವುಗಳನ್ನು ಕನ್ನಡಿಸಬೇಕೆಂದು ಇಂಗ್ರೇಜಿ ಕಲಿಯಹತ್ತಿದೆನು. ಆದರೆ "ನಾನಿತ್ತೆಳೆದರೆ ತಾನತ್ತೆಳೆವುದು" ಎಂಬಂತೆ ಇಂಗ್ರೇಜಿಯು ನನ್ನ ಕೈಸೆರವಿನ ತೊತ್ತಾಗದೆ ನನ್ನನ್ನು ಮೋಹ ಪಾಶದಲ್ಲಿ ಸಿಲುಕಿಸಿ ಬಿ. ಎ. ಪರೀಕ್ಷೆಯ ಕಡೆಗೆ ಎಳೆದೊಯ್ದಿತು. ಆ ಬಳಿಕ ನಾನು ಸಂಸಾರದ ಸುಲಲಿತಕ್ಕಾಗಿ ಅತ್ತಲೇ ಹೆಚ್ಚು ಮನಗೊಟ್ಟೆನು. ಬಿ. ಎ. ಪಾಸಾದೆನು. ಮುಂದೆ ವಿದ್ಯೆಗೆ ತಕ್ಕ ಉದ್ಯೋಗ ಹುಡುಕತೊಡಗಿ ಅವುಗಳ ಲಾಭದಿಂದಲೇ ಕೃತಾರ್ಥನಾದೆನು.

ಮಕ್ಕಳು ಮರೆತರೂ ತಾಯಿಯು ಮರೆಯಲಾರಳೆಂಬ ಗಾದೆಗೆ ಅನುಸರಿಸಿ ನನ್ನ ಕನ್ನಡ ಸರಸತಿಯು ತಾನು ನನ್ನನ್ನು ಮರೆಯಲಿಲ್ಲ. ಈಗ ಎಂಟು ತಿಂಗಳಿಂದ ನನ್ನ ಬಾರಿ ಹುಬ್ಬಳ್ಳಿಗೆ ಬರುವಾಗ ನನ್ನ ಬಗೆಯನ್ನು ಹಾಳ್ಗೆಡಿಸಿ ಸವಿಸವಿಯಾದ ಕನ್ನಡನುಡಿ ಹಬ್ಬಗಳನ್ನು ಸೂಸಿದಳು. ಮಾಗಿಕಟ್ಟಿದ್ದವೆ ತನ್ನ ಒಲುಮೆಯುಳ್ಳ ನುಡಿಯಿಂದ ನನ್ನ ಮನದಲ್ಲಿ ನವ ನವಿರನ್ನು ಸನ್ನಿಧಿಗೊಳಿಸಿತು. " ಕೇಳುವೆನಾದರೆ ಗೋಳನ್ನು ಕೇಳುವ ಜನರನು ನಾ ಕಾಣೆ " ಎಂಬ ನುಡಿಗಳು ನನ್ನ ನಾಲಿಗೆಯಲ್ಲಿ ಕುಣಿಯ ಹತ್ತಿದವು. ನಾನು ಇಂದಿನ ವರೆಗೆ ತಾಯಿಗೆ ತಪ್ಪಿದ ಪಾಠವನ್ನು ನನ್ನಲ್ಲಿಯೇ ಹಳಿದು ಆಕೆಯ ಅಡಿಗಳಲ್ಲಿ ನನ್ನ ಮನವನ್ನು ಸೇರಿಸಿದೆನು. ಆಕೆಯು ಬಗೆಯುಬ್ಬು ಮೂಡಿ ಮುನ್ನುಗ್ಗಿಕೆಗಳನ್ನು ಅರಿಸಿದಳು. ಅವೇ ಇವು.

ಕನ್ನಡಿಗರ ಮುಂದೆ ಇವುಗಳನ್ನು ಇಡುವಲ್ಲಿ ಒಂದು ಬಗೆಯಿಂದ ನನ್ನನ್ನವನಿಗೆ ಹೊಸ ತಪ್ಪುಗಾರನಾಗುವೆನೆಂಬುದರಿಂದಲೇ ನನ್ನ ಹಾಡ್ಗೆಯನ್ನು ಹಳ್ಳಿಯ ಹಿರಿಗರಿಂದ ನಾಚಿವನ್ನು ಇಡಲಿಲ್ಲ.

ಹುಬ್ಬಳ್ಳಿಯ ಕನ್ನಡ ಸಾಹಿತ್ಯಸಂಘದವರು ನನ್ನ ಕಾವ್ಯವನ್ನು ಆದರಿಸಿ ನಾಡಿಗನ್ನು ತೆರೆಯುವರಲ್ಲಾಗಿ ನಾನವರ ಹಂಗಿಗನಾಗಿರುವೆನು.

ಕೊನೆಯಲ್ಲಿ " ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ. " ಎಂದು ಜಗದೊಡೆಯನಡಿಯಲ್ಲಿ ಬೇಡಿಕೊಂಡು ಈ ಬಗೆದೆರೆಯನ್ನು ಮುಗಿಸುವೆನು.

ಹುಬ್ಬಳ್ಳಿ,
೬--೯--೧೯೩೩

ಸ. ಪ. ಗಾಂವಕಾರ.

# ವಿಷಯಾನುಕ್ರಮಣಿಕೆ.


| ವಿಷಯ. | ಪುಟ. |
|---|---|
| ೧ ಪ್ರಾರ್ಥನೆ .... .... .... | ೧ |
| ೨ ರೈತನ ಗೋಳು .... .... .... | ೬ |
| ೩ ಮಲೆನಾಡ ಜೀವ .... .... .. | ೧೩ |
| ೪ ಪೊಳಲು .... .... .... | ೨೧ |
| ೫ ಬಡವರ ಕಾಮಧೇನು .... .... | ೩೦ |
| ೬ ಬಗನಿಯ ಮರ .... .... .... | ೩೩ |
| ೭ ಕೋಗಿಲೆ .... .... .... | ೩೫ |
| ೮ ಬೂದಿಯ ಜೀವ ಮತ್ತು ಕೋಗಿಲೆ .... .... | ೪೦ |
| ೯ ಮುಳ್ಗಳ್ಳಿ .... .... .... | ೪೧ |
| ೧೦ ಮುಗಳ ಮೊರೆ .... .... .... | ೪೫ |
| ೧೧ ಸಾಡಕಾಳಿ .... .... .... | ೫೦ |
| ೧೨ ಮನಸೂರೆ .... .... .... | ೫೨ |
| ೧೩ ಸೊಣ .... .... .... | ೫೭ |
| ೧೪ ಅಣಬೆ .... .... .... | ೬೦ |
| ೧೫ ಜೇಡನ ಬಲೆ .... .... .... | ೬೨ |
| ೧೬ ಮುಗಿಲು .... .... .... | ೬೬ |

# ಒಪ್ಪೋಲೆ.

| ಪುಟ. | ಸಾಲು. | ತಪ್ಪು. | ಒಪ್ಪು. |
|---|---|---|---|
| ೫ | ೧೧ | ಪಸಪು | ಒಸಪು |
| ೧೦ | ೧೪ | ಒಕ್ಕಲಿನ ತಂದ | ಒಕ್ಕಲ ತಂದವ |
| ೧೪ | ೪ | ಪಸಪು | ಒಸಪು |
| ೩೮ | ೧೮ | ದೆಸೆಯು | ದೆಸೆಂಯು |
| ೩೮ | ೧೮ | ಕೆರಗಿಣಿಗಳು ಎಂಬುದನ್ನು ಕೆಂಪು ಗಿಣಿಗಳು ಎಂದು ಓದಬೇಕು. | |



॥ ಓಮ್ ॥

# ಮುಗಿಲು.

---

## ಪ್ರಾರ್ಥನೆ.

೧

ಪರಮನೆ ನಿನ್ನಯ ಸಂಯಮನು ಪಂಕ್ತಿಸೆ
ಬಳಸಿದೆ ಜಠರದ ಭವಗಳಲಿ
ತಿರಿಯುತಿ ನಿರಿಯು ತನುವನು ತಳಿಸಿದೆ
ಅರಿಯುವ ಜನನಿಯ ಜಠರದಲಿ

೨

ಆಗುವದೆಲ್ಲವು ಆಗಲಿದೇವನೆ
ಭೋಗಿಪ ಕರ್ಮವಭೋಗಿಸುವೆ
ನೀಗವ ದುಗುತಪ್ಪ ಬೆಂಕೊಂಡಾದಲಿ
ಭೋಗಿಪ ಕರ್ಮವ ಭೋಗಿಸುವೆ

೩

ಕೇಸುವಿನೆಲೆಗಳ ಮೇಲಿರು ಬೀಳುವ
ನೀರವು ಜಾರುವ ತೆರದಿಂದೆ
ಹೊಸಹೊಸ ಸಂಕಟ ಸಂಚಯವೆರಗುತ
ಮುಂಕೊಂಡೋದಲಿ ಮನದಿಂದೆ

# ಮುಗಿಲು.

೪

ಟೊಂಗೆಯು ಮೇಲಣ ಸಂಗನತೆರದಲಿ
ಲಂಘನ ಗೆಯ್ಯುವ ಮನವನ್ನು
ಸಾಹಸಗಾರೊಳಿಯ ಮುಗಿಲದಾರದ
ತಿರುಗಿಸು ನಿನ್ನಡಿಯವರೆಗೆ

೫

ಕಾರುಣ್ಯಾಂಬುಧಿ ಕನಿಕರ ತೋರೆಯೊ
ಕರಗುವ ಕರುಳಿನ ನಿಲಯಕ್ಕೆ
ಬಾಳಿನ ಬೆಳಕದು ಸಾಲದೆ ಸಾಗಿದೆ
ಕೇಳುವೆ ಶಾಂತಿಯ ಕುತುಮೊರೆಯು

೬

ತಾಯಿಯು ನೀನೇ ತಂದೆಯು ನೀನೇ
ಬಂಧುವು ನೀನೇ ಬಳಗಗಳು
ನೀನೇ ದೇವನೆ ಜನತೆಯು ನೀನೇ
ಸರ್ವವು ನೀನೇ ಜಗದೀಶ

೭

ಮಕ್ಕಳ ಮುದ್ದಿನ ಮಾತಿಂದಲುತೆ
ಬಿಕ್ಕುತ ಕೇಳುವೆ ದಯರಸವ
ಸತಿಪತಿ ಮಿಥುನದ ವಿರಹದ ಸಂದೊಳು
ತೀಡುತ ಬೇಡುವೆ ಘಟ್ಟಿಯನು

೮

ತಾಯಿಯು ಆದರೆ ತಂದೆಯು ಆದರೆ
ಸತಿನೀನಾದರೆ ಕಾಡುವೆಯು
ತಾಯಿಯು ತಂದೆಯು ಪಾರದ ಪರಿಯನು
ಸತಿಪತಿ ಸಲುಗೆಯು ನೀ ಸರಿಯು

೯

ಕಾಡುವೆ ಯಾತಕೊ ಕಾಡಿಸಿ ಕಾಡಿಸಿ
ನೋಡುವೆ ಯಾತಕೊ ಪೊಡವಿಪನೆ
ಪೀಡನ ತುಂಬಿನ ಬೀಡೊಳು ಬೀಳಿಸಿ
ಕಾಡಿಪ ಗಾಡಿಯದೇನಯ್ಯ

೧೦

ವಿಧಿಯನು ಬೇಡೆನು ಪದವಿಯ ಬೇಡೆನು
ಪದುಳದೆ ಬೇಡುವೆ ದರುಶನವ
ಹೃದಯದೆ ಕದಲದ ಭಕುತಿಯ ಪಕ್ಕೊಡೆ
ಬೇಡುವೆ ಕೇಳೆನು ಪಂತಸ್ಸು

೧೧

ನಶಿಸದ ನಾಕದ ಸಿಧಿಯನು ಪೊಂದೆನು
ಜನಪದ ಸದನವು ಸೊರಗುತಿರೆ
ಜನುಮಾಂತರಗಳ ಜನಪದ ಸೇವೆಯ
ಜನುಮವ ನೀಡೈ ಪರಮೇಶ

೧೨

ದೇಹದ ದಾರ್ಢ್ಯವು ದಾಟುತಲೋಡುವ
ಮುನ್ನವೆ ಸನ್ನುತ ಪರಮನನು
ಭವಸಂಸಾರದ ಬವರದ ಬಳಲಿ
ದಾಟುತ ಸಾರೆಲೆ ಒಡಲೊಡೆಯ

೧೩

ಕಾಣದ ವಿಶ್ವವು ಕಾಣುತಲಿದ್ದಿತು
ದೇವನ ಲೀಲಾ ಮಾತ್ರದಲಿ
ಲೀಲೆಯದೆಂತೋ ಬಾಲಕವೃಂದದ
ಗುರಿಗೊತ್ತಿಲ್ಲದ ಚೇಷ್ಟೆಯದೊ ?

೧೪

ಹುಡುಗರ ತಂಡವು ಹೂವಿನ ಮೇಲಿನ
ಹುಳುಹುಪ್ಪಟೆಗಳ ಹಿಡಿಹಿಡಿದು
ಕಾಡುತ ನಲಿನಲಿದಾಡುತ ನೋಡುತ
ಪೀಡಿಪ ರೀತಿಯಿದೇನಯ್ಯ

೧೫

ಭವಸಂಸಾರದ ಬವರದ ಬವಣೆಯು
ಬೇಕೊಳು ಪುಟಕಿಕ್ಕೇಳದಿರೆ
ಭುವನದ ಬೇಸಿಯ ಬವಣೆಯನೀಯುತ
ಬಗೆಹರಿಸುವ ಬಗೆ ತಾನರಿಯು

೧೬

ಜಾತಿಮತಂಗಳ ಕಲಹದ ಕೊಳೆಯಲಿ
ನೀತಿಯು ದೇವನ ಕಾಣದಿದೆ
ಮಾತಿಗೆ ಮಾತಿಗೆ ಜಾತಿಯನೆತ್ತುವ
ಪಾಪಿ ಜನಂಗಳ ಕಾಣುತಿದೆ

೧೭

ನೀತಿಯ ನೂಕಿದ ಜಾತಿಯದೆಂತೋ
ಭೀತಿಯ ಬಿತ್ತುವ ಬವಣೆಯದು
ಬಂಧುವನೆಲ್ಲವ ಕೊಂದಿದೆ ಜಾತಿಯು
ಬಂಧನ ಬಿಡಿಸೈ ಜಗದೀಶ

೧೮

ಓಮಕ್ಷರದಾ ನಾದದಿ ನೆನೆಸುವ
ಸೀಮೆಯ ದೇವನೆ ಎಲ್ಲಿಹೆಯೊ
ನಾಮದ ಮಾತ್ರವೆ ನರರಿಗೆ ಕಾಣುವ
ನೇಮವನೆಲ್ಲಿಯು ಕಾಣದಿದೆ

೧೯

ಜೀವನ ತಿಳಿಯೆನಜೀವನ ತಿಳಿಯೆನು
ಪಾಪದ ಭೂಮಿಗೆ ಬೀಳದಿಹೆ
ಮೋದವು ತುಂಬಿರೆ ಹೃದಯನೆ ಜೀವಾ
ಜೀವದ ಬವಣೆಯ ನಾನರಿಯೆ

೨೦

ಮುಗಿಲಿನ ಮಡಿಲಲಿ ಮಿಡಿಮಿಡಿದಾಡುವ
ಮೋಹದ ಗಾಳಿಗೆ ವೈಮನರವೆ
ಎಲ್ಲಿಹೆ ದೇವನೆ ನಿಲ್ಲದೆ ಬಾರೆಲೊ
ಉಲ್ಲಿಯ ಮೆಲ್ಲುಲಿಸಲಿಗೆಯಲಿ

೨೧

ಬಾರೆಲೊ ದೇವನೆ ಅಂಬರದಿಂಬಿನ
ಶಿಖರವ ಇಂಬಿಸಿ ಚುಂಬಿಸುವ
ನನಸಿನ ಮೋಹದ ಮುಗಿಲಿನ ಮೊನೆಯದು
ಮನವನು ಮಾರಿಸಿ ಕುಣಿಸುತಿದೆ

೨೨

ತೇಜದೆ ಬೆಳಗುವೆ ತೇಜವ ಕೊಡುನೀ
ವೀರ್ಯಕೆ ಇರ್ಕೆಯು ನೀನಿರುವೆ
ವೀರ್ಯವ ಕೊಡುನೀ ಬಲವನು ಕೊಡುನೀ
ಬಲವಂತನು ನೀನಾಗಿರುವೆ

೨೩

ಓಜವ ಕೊಡುನೀ ಓಜವು ನೀನೇ
ಮನ್ಯುಗೆ ಮನೆ ನೀನಾಗಿರುವೆ
ಮನ್ಯುವ ಕೊಡುನೀ ಸಹನವ ಕೊಡುನೀ
ಸಹನದ ನೀಮಾಪುರುಷನಿಹೆ.

# ರೈತನ ಗೋಳು.

೧ ( ಪಾಳಾದ ರೈತನು ಹೊಲವನ್ನು ಕೋರಿಗೆ ಕೇಳುವನು. )

ಹೇಳುವುದಾರಿಗೆ ಗೋಳನ್ನು!
ಕೇಳುವ ಜನರನು ನಾ ಕಾಣೆ!!
ತಿರೆಯೊಳು ಸಿರಿಯುಂ ಬೆರೆತಿಹರು
ಮಲೆತಿಹ ಮದಗಜದಂತಿಹರು
ತುಳಿಯುತ ಒಕ್ಕಲ ಮಕ್ಕಳನು
ಗಳಪುತ ಸೆಳೆಯುತ ಭೂಮಿಯನು
ಒಕ್ಕಲ ಮಕ್ಕಳು ಹೆಕ್ಕಳದೆ
ಕಳೆಯುವ ಬಾಳುವೆ ಜೈತ್ರಿಹುದು
ನೇಸರ ಬೇಗೆಗೆ ಬಳಲಿದಿಹ
ಕಾಯವು ಕೊರಗಿತು ಸಿರಿಸರಿಗೆ
ಹಳ್ಳಿಯು ಪಳ್ಳಿಯು ಸುಖಜನವು
ಸಾಲದ ಶೂಲದ ನೆಳಲ್ಲಿ
ನೆಲಸಲು ನೆಲವೇ ಕಾಣದಿರೆ
ಹೊಟ್ಟೆಯು ಬಟ್ಟೆಯು ತೋರದಿರೆ
ಮನಕದು ಮನ್ನಣೆ ಮಾಡದಿರೆ
ಸಿರಿವನೆ ಸೆರೆವನೆ ಸೇರಿದನು
ತಿರೆಯನು ಕೋರಿಗೆ ಕೋರಿದನು
ಹೇಳುವುದಾರಿಗೆ ಗೋಳನ್ನು !
ಕೇಳುವ ಜನರನು ನಾ ಕಾಣೆ !!

೨ ( ಹೊಲದ ಒಡೆಯನು ಒಕ್ಕಲಿಗನಿಗೆ ಹೇಳುವ ಮಾತು. )

ಒಡೆಯನು ಒಡತಿಯು ಸಡಗರದೆ
ಬಿಡಿಬಿಡಿ ಮಾತಿನ ಉಡುಪಿನಲಿ
" ಕೊಡುವೆವು ಕೋರಿಗೆ ಕಡುಕಷ್ಟ
ಕೊಟ್ಟೆವು ಹೊಲಗಳ ಲಾವಣಿಗೆ

## ಮುಗಿಲು.

ಉಳಿದಿಹ ಹೊಲಗಳ ಮಾತುಗಳ
ತೆಗೆಯಲು ಬಗೆಯದು ಬಾರದಿದೆ
ಊಳಿಗ ಬಳಗವು ಬಳಸುತಿದೆ
ತಳೆಯಲು ಹೊಲವನು ತುಂಬುತಿದೆ
ಚಣಮೊಳು ಜನಗಣ ಮುಗುವಂದು
ಲಾವಣಿಗಳೆಯುವ ಬಗೆಯನ್ನು
ಮಾಣದೆ ಕಾಣುವೆ ಮೌನವಿದು
ಮೀರಿದ ಗೇಣ್ಣೆಯು ಮಾತಲ್ಲ
ಮಾತಿನ ಮಲ್ಲರು ನಾವಲ್ಲ
ಸಂತೆಯ ಹೊಂಚಿನ ಮಾತಲ್ಲ
ನಡೆ ನಡೆ ಬಿಡು ಬಿಡು ಹೊಲವನ್ನು
ಕೊಡುವೆವು ಬಿಡದಲೆ ಎನಿಬರಿಗೊ
ಸಲುವಳಿಯಾದರೆ ಬಳಿಸಾರು
ಚೆಲುವಿನ ಹೊಲವನು ಸಲುಗೆಯೊಳು
ಲಾವಣಿಯೋಲೆಯ ಲಕ್ಷಣವೆ
ಮೋಹದ ಮಾತನು ಬಳಸನಲೆ
ಆಳಿನ ಹೋಳಿನ ಹದವಿಂತು
ಬಿಟ್ಟಿಯ ಬಿಡಯುವ ಜೈತಿದ
ಬಿಡದಿರು ಒಡೆದಿಹ ಭೂಮಿಯನು
ನೋಡುವೆ ಸಮಯವ ಸಂದರಿತು
ಗೇಣಿಗೆಯಾಣೆಯ ಮಾಡದಿರು
ನ್ಯಾಯದ ಸದನಕೆ ಸೆಳೆಯದಿರು"
ಕೃತ :— ಗೇಣಿಗೆ ಗೋಣನು ಕಟ್ಟಿದನು
ಮಾರಿಯ ಮೋರೆಯ ಮೆಟ್ಟಿದನು
ಪೇಳುವುದಾರಿಗೆ ಗೋಳನ್ನು !
ಕೇಳುವ ಜನರನು ನಾಕಾಣೆ !!

# ಮುಗಿಲು.

## ೩

ಮೊಳಗುತಿ ಬಿರುಸಾಗಿ ಬಿಸುವಿನಲಿ
ಸೀಡಿದ ಬೇಟದ ಒಲಿಯಲ್ಲಿ
ಎರೆಯನು ಸೇರಿಸೆ ಕೃತಸನು
ಮರಳಿದ ಮನವನುತಾಪದಲಿ
ಮುಂದಿನ ಬೆಳೆಯನು ಮುಡುಪಿಟ್ಟು
ಇಂದಿನ ಕಾಳಿನ ಇರ್ಮಡಿಗೆ
ತಂದುಣ್ಣುವನೊಗ ಬಗೆಬಗೆದು
ಸಂದಿತು ಸಮಯವು ಎಂದೆನವೆ
ಇಂದಿನ ಸಾವನು ಮುಂದೊತ್ತಿ
ಒಂದಕೆ ಎರಡನು ಬರೆದಿತ್ತ
ಮರುಗುವ ಕೃತನ ನೋಡತ್ತ

× × × ×

ಬಾಳಿಕೆ ಬಾರದೆ ಆವುಗಳು
ಬಾಳಿನ ಕೊರಳನು ಕೊಯ್ಯುತಿರೆ
ತರುಗಳ ತಡಿತಿಹ ಘನಸಿಧಿಗೆ
ತರಳನ ತರಳೆಯು ಬಗುಸಕ್ಕೆ
ತನ್ನಯ ಹೊಲವನು ಅಡವಿಟ್ಟು
ಸೀಗದ ಸಾಲದ ಹೊರೆಹೊತ್ತು
ತೀರದ ಬಡ್ಡಿಗೆ ಹಣತೆತ್ತು
ನಾಳಿನ ಬೇಗೆಗೆ ಬೇಯುತಿಹ
ಕೊನೆಯಲಿ ಹೊಲವನು ಮಾರುತಿಹ
ಸಾವಿನ ಬರವನು ಬಯಸುತಿಹ
ಮಿಡುಕುವ ಕೃತನ ನೋಡಲ್ಲಿ

× × × ×

## ಮುಗಿಲು

ಸ್ಪರ್ಶಗೊಳ್ಳುವ ಸತಿಮಣಿಯು
ಮುದ್ದಿನ ಮಕ್ಕಳ ಸ್ನೇಹಿಯು
ಹೊಲಬಿಗ ಬಾಳೆಯು ಪ್ರಕೃತಿಬಗ
ನಾಣಿನ ಮುಚ್ಚಲು ಬಿಚ್ಚಿಗಳ
ಮೇಣವೂ ಕಾಣದೆ ಕೊರಗುತಿಹ
ಹೂಣಿಗ ಕೃತನ ಕಾಣಲ್ಲಿ

ಹಡೆದಿಹ ಬಿರಿಯುರ ಕೋಟಲೆಗೆ
ಮಡದಿಯ ಮಕ್ಕಳ ಮುದ್ದಿಂಗೆ
ಮೊರದೆ ಇರುತಿಹ ಪ್ರಾಣನು
ನಾಮಿತ ಹೊರಯಿಸೆ ಮಾನವನು
ಸೂರೆಯ ಗೆದ್ದೊಲು ಬರುತಿಹನು
ಕರುಣಿಸ ಸಾಧನ ಬಿಟ್ಟಿಹನು
ಕಾಣತರೆ ನಿಂತರೆ ಮುಟ್ಟಿಹುದು
ಮುದ್ದಿಗೆ ಮಾರಿನ ಸುಟ್ಟಿಹುದು
ಬಿಟ್ಟಿಯು ಮುಟ್ಟಿಗೆ ಗತಿಯಿಲ್ಲ
ಬಾಣಿನ ಕೂಗೆ ಮೊದಲಿಲ್ಲ.
ಅದರಿಂ ಕೋಟಲ ಕುತ್ತುಗಳ
ತುದಿಮೊದಲಿಲ್ಲದ ತೊಳಲಿಕೆಗೆ
ನರಳುವ ಹೊರಳುವ ಬಕ್ಕಲನು
ನಡೆನಡೆ ನೋಡಲೊ ಮೊರದಲಿ

ಬಾಳಿನ ಗೋಳಿಗೆ ತಲೆತೆಗೆದು
ಕೆಳೆಯದು ಕರಳದು ಬಂದಿಹುದೆ
ಹಿಟ್ಟಿಗೆ ಬಾರದ ಸತಿಸುತರ
ಹುಟ್ಟಿನ ಮಾತಿಗೆ ಸಿಡಿದೆದ್ದು

# ಮುಗಿಲು.

ಸೆಳೆಯುತ ಸವೆಯುತ ಮನೆಯವರ
ಮಿಡುಕುತ ಮಿಂಚಿಪ ಮಾತಿಂಗೆ
ತೊಳಲುವ ಒಕ್ಕಲಿ ನೋಡಲ್ಲಿ

× × × ×

ಹಳ್ಳಿಯ ಮುದುಕರು ಹಳ್ಳಿಗರ
ಸವನದ ಸಿರಿಸಂಪತ್ತುಗಳ
ಸೆಳೆವ ಪಟೇಲರ ಪೇಟೆಗಳ
ಸವಿಸವಿ ಮಾತಿನ ಜೋಡಣೆಯು
ಕಲಿಯುತ ಹಳ್ಳಿಗಳಳೆಯುತಲಿ
ಕಲಹವ ಬೀರುತ ಹಳ್ಳಿಗರೊಳ್
ನಾಡಲಿ ನಟ್ಟಿತು ನಂಬುಗೆಯು
ನೆಗೆನೆಗೆದೋಡಿಸಿ ಕಾನನದಲಿ
ಮಿಗೆಮಿಗೆ ನ್ಯಾಯದ ಸದನದಲಿ
ಬಾಳುವೆ ಬದುಕನು ಬಲಿಗೊಟ್ಟ
ಒಕ್ಕಲಿನ ತಂಡ ನೋಡಲ್ಲಿ

× × × ×

ಪುರಜನ ವ್ಯಸನವು ಬಳಸಾರಿ
ಹರಡುತ ಹಳ್ಳಿಗರನು ಕಾಡಿ
ಹಿಂದಣ ಹಿಡಿತದ ವೈಭವನು
ಮುಂದೆಳೆದೋಡಿಸಿ ಒಡನಾಡಿ
ನಾಡಿನ ಸಗ್ಗದ ಬಾಳ್ವೆಯು
ಪೀಡಿಪ ಕೃತಕ ನೋಡಲ್ಲಿ

× × × ×

ಶಿಕ್ಷಣ ಹೊಂದಿದ ಕೆಲಜನವು
ನೀತಿಯ ನೇಮವ ತೆಗೆದೊಗೆದು

ಸತಿಸುತೆಪಿತೆಯರ ಶೀಲವನು
ಬಿರುದಿಗೆ ಸೂರೆಯ ಗೆಯ್ವವರು
ಬಿರುದಿನ ಸಿಂಗರ ಸೆಳವಿನೊಳು
ಸತಿಸುತೆಪಿತೆಯರ ಮಾನವನು
ಮಸಣದ ಕಾಣಲು ಒಲುಮೆಯೊಳು
ಮಿಡುಕುವ ಮುಗ್ಧನ ಮನುಜನಿಗೆ
ಸದನವ ಸೇರಲು ಸೆರೆಯಾಯ್ತು
ಹೇಳುವುದಾರಿಗೆ ಗೋಳನ್ನು !
ಕೇಳುವ ಜನರನು ನಾ ಕಾಣೆ !!

೪

ಸಮತಾವಾದಿಯು ದಿನಸ್ರೋಲಿದು
ಸಮನಿಸ ಜಂಬೂ ದ್ವೀಪಕದು
ಒಕ್ಕಲಿ ಸಂಘಗಳುತ್ತರದ
ಒತ್ತುವ ಜೇಗೆಗೆ ಘೋರ್ಗರೆದು
ಮೊಳೆಯಲು ಬೆಳೆಯಲು ಕಳೆವೆತ್ತು
ಗಳಿಕೆಯು ಬಾಳಿಗೆ ಬೆಲೆವೆತ್ತು
ಉಚಿತದ ಒಲುಮೆಯು ಶಿಕ್ಷಣದ
ಮುಕುತಿಯು ಮಾರ್ಗವ ಮುಸಕಿತ್ತು
ಕೀಳ್ಮೇಲೆನ್ನುವ ಭಾವನೆಯು
ಕೇಳಿಯ ಜೋಗೋಳಿ ಗೆಯ್ಯುತಲಿ
ಬವರದ ಬಯಕೆಯು ಕೂರ್ಮೆಯಲಿ
ಹಾರಿಸಿ ಹೇಯುತ ಗೆಯ್ಮೆಯಲಿ
ಜೀವನ ಧರ್ಮವು ನೇಹದಲಿ
ನೆಲಸಿರೆ ನಾಡಿನ ಜನರೆಲ್ಲ
ನಾಡಿನ ಜೀವಿಗೆ ಹಾಮುತಲಿ

## ಮುಗಿಲು.

ಜೀವಿಯು ನಾಡಿಗೆ ಆಪುತಲಿ
ಮೀಸಲವೀಯುತ ಮನವೊಲಿದು
ಹಳ್ಳಿಯ ಸದನವ ಸುಮನಸರ
ಸದನಕೆ ಸಾಸಿರ್ಮಡಿಮಾಡಿ
ಸಗ್ಗವೆ ಹಿಗ್ಗಿದ ಹಳ್ಳಿಯಿದೊ
ಮುಗ್ಗಿತು ಮೊದಲಿನ ತಾಪವದೊ
ಎನುತಲಿ ಸಾರುತ ಬರುತಿರುವ
ದಿನಗಳ ಬರವನೆ ಹಾರೈದು
ಮರುಗುತ ಮಿಡುಕುತ ಮೈಮರೆದೆ
ಪೇಳುವುದಾರಿಗೆ ಗೋಳನ್ನು !
ಕೇಳುವ ಜನರನು ನಾಕಾಣೆ !!



ಮುಂಗಿಲು.

# ಮಲೆನಾಡ ಬೆಳವ.

೧

ಕಾಣೆಲೊ ಬನದಲಿ ಇಬ್ಬನಿಯುದುರುತ
ಜೀವನು ಸುಮನಕೆ ಹಾತುತಿದೆ
ಕೊಂಕುತ ಕೊರಳನು ವನಸಿನ ನಾಟಿಸಿ
ಜನಕವು ನಲಿಸಿಯು ಸೀಡುತಿದೆ

೨

ರಾಗದೆ ರಾಗವ ತೀಡುವ ತೂಕಗೆ
ತನ್ನನು ತಾನೇ ಮರೆಯುತಿದೆ
"ಕುಕುರ್ರ ಕುರ್ರ ಕುರ್ರ" ಪೊಲಿಯುತಿ
ತಿರಿಗ ಗರ್ಘೀರತೆ ಬೀರುತಿದೆ

೩

ಋತುಮಾನಂಗಳ ಸರಿಯನು ನಡೆಯುತ
ಕನಸಿನ ನಸುಗಳ ಹೆಣೆಯುತಿದೆ
ಭಾನುವು ಬಾಂದಳ ನೆಟ್ಟಿಯು ನೇರಲು
ಕಾನೊಳು ಗಾನವ ಗೆಯ್ಯುತಿದೆ

೪

ಮೋದಿಸಿಗೀಶನ ದೂತನೆ ನಿನ್ನಯ
ವಾಣಿಯ ಜಾಲಿಸಿ ಸ್ಫುರಿಸುತಿದೆ
ನಾಕವು ನೀನೋ ನೀನೇ ನಾಕೋ
ಎಂಬುದರರ್ಥವನು ನಾನರಿಯೆ

೫

ಬರಹದ ಬಣ್ಣದ ಮಾತನು ಒಳಸಲು
ಬಾಳಿಕೆ ಸೊಲ್ಲನು ಸಾಲಿಸಿದೆ.

ಮುಗಿಲು.

ಶೀಲದ ಸೂಕ್ಷ್ಮದ ಮೋಹವು ಮಣಿಕಿರಿ
ಮನದಲಿ ಮರುಮನಿ ಪೊಳೆಯುವುದು

೬

ನಾದದೆ ಸಿಲುಕಿದ ಮನುಜನ ಮನವದು
ಧ್ಯಾನದ ಭಾವದೆ ನುಸುಳುವುದು
ನಾದದ ಮಂಜಿ ಮನಕಿರಿ ಮೋಲದು
ಕಾಣಿಕೆಯಂದದೆ ಕಲೆಯುವುದು

೭

ಕಾಲನ ಮೂರನು ಮರೆಸುತಲೊರಸುತ
“ ಕುಕುರ್ರ ಕುರ್ರ ಕುರ್ರ ” ರವವು
ಮೋಹದನಂತದೆ ಮರೆಯಾಗೇಳುತ
ಸೋನದ ಬೀರುತ ಸಾರುತಿದೆ

೮

ಕಾಲನ ಕಳೆಯದು ಜೀವನ ಜೋಕಿದು
ಕಾಣದ ಕಾಯುವ ಕೀಲಿಯಿದೆ
ಗೋಲಗಳೆಲ್ಲವು ಕಾಲಗಳೆಲ್ಲವು
ದೇವನ ಬಳಸುವ ನಾದವಿದೆ

೯

ನೇಸರು ಮುನ್ನೀಸಾರುವ ಮುನ್ನವೆ
ಧರಣೆಯು ತರಣಾರ ಕರೆಯುತಿವೆ
ಶಾಂತಿಯ ನಿಲಯದ ನೆಲಸಲು ನೆಲದಲಿ
ನೀತಿಯ ನೇಮದ ನೆರೆಯುರುಹಿ

೧೦

ಗುರುತನ ಮೊರತನ ಹಿರಿಕಿರಿತನಗಳ
ಗರಿಯನು ಕೊರೆಯುವ ನರಶಿಶುವು

## ಮುಗಿಲು.

ಅರುತಿರೆ ಜೀವನ ಬೋಧನೆಯನಿದನಿ
ಕೂಸ್ಸಿಗೆ ಗುರುತನ ಪಾಂಡೆನು

೧೧

ಕೇಕಾರವವದು ಪೇಸರವಿಡುತಿರೆ
ಕೇಳನು ನಲುಮೆಯೊಲಾವನಿಯು
“ ಕುವ್ವೋ ” ಹೇಳುವನಿ ಮನವನು ಸೆಳೆದಿರೆ
ಕೊನೆಯನು ಮನಕದು ತೋರದಿದೆ

೧೨

ನವಿಲಿನ ಸೊಬಗನು ಕೋಗಿಲೆಯುಲಿಯನು
ಗಳಪುವ ಗಿಳಿಗಳ ಮೇಳವನು
ವರ್ಣನೆಗೆಯ್ಯುವ ಕವಿಕುಲ ಗುರುಗಳು
ಜೀವನ ಕಾಣದೆ ಕವಲಿದರೊ

೧೩

ಕಣ್ಮರೆಯಾಯಿತು ಜೀವನವೆಂತೋ
ಕವಿಕುಲ ಗುರುಗಳ ಕಣ್ಣಿಂಗೆ
ಸೊಕವವು ಮನದಲಿ ವಿವಿಧ ವಿಚಾರವು
ಜೀವನು ದೇವನ ಸರಿಗೆಯ್ಯೆ

೧೪

ಸೊಬಗಿಗೆ ಬೀಡಿದ ವಡುವಣ ಕಡಲಿನ
ಜೆಡಗಿನ ಮುಡಿಯಲಿ ಅಲೆಯುತಿರೆ
ಸಿಡಿಮಿಡಿಗೊಂಡಿತು ನನ್ನಾ ಮನವದು
ಒಡನೆಯೆ ಸಂತಸವೈದುತಿರೆ

೧೫

ಎಕಾಸಿಯ ಸಿಕರವ ಸಿರುಕಿಸಿಕೊಂಡಿದೆ
ಕಾಣೆನು ಗುಣಗಳ ಜೋಡಣೆಯ

೧೬

## ಮುಗಿಲು.

ಕಂಡೆನು ಜೀವನ ಮಂಡಲದಲ್ಲಿಯೆ
ಕವಿಗಳು ಕಾಣದ ಮೋಹವನು.

೧೬

ಮಲೆನಾಡಿನ ನಟ್ಟಡವಿಯ ಜೀವನ
ಬೆಡಗನು ಕೆಡೆಸುಡಿಗೆಯ್ಯುತಿಹ
ಬೆಡಗಿನ ಗರುವಿಕೆ ಪಡೆದಿಹ ಪಕ್ಷಿಯ
ಪಡೆಯುವೆ ವಿಧಿ ತಾ ಬಿಟ್ಟಿಹನೊ?

೧೭

ಸೋಗೆಯ ನೇರುವ ಭರದಲಿ ಸರಸತಿ
ವರನನು ಮಾರುತ ಸ್ವೈರದಿಯೆ
ನವಿಲಿನ ಚಲುವನು ಚಾಚಿಸೆ ಜೀವನ
ಬಿನದಕೆ ಮಾಡಿದನೇಂ ವಿಧಿಯು?

೧೮

ಬಗೆಬಗೆಬಣ್ಣದ ಹೊನ್ನಿನ ಕುಂಚವು
ಬರೆಯುವ ಭರದಲಿ ಧರೆಗುರುಳೆ
ಬೀಗುವ ಜೀವನ ಕಾಯುವ ಕಳೆಯನು
ತಳೆಯುತ ವಿಧಿಯನು ಪೊಗಳುವುದೊ?

೧೯

ಚಿತ್ರವಿಚಿತ್ರವು ಮಾನ್ಯಮನೋಹರ
ಮಾಯೆಯ ಮಾಟದಮನೆತ್ತರೆಗೆ
ಕಾವ್ಯದ ಕವಿಕಲ್ಪನೆಯಲಿ ಕಾಣದೆ
ಕಾನನಕ್ಕೈದುತ ಕಾಣುವುದು

೨೦

ನೀಲಾಂಬರನೆಳೆಮಿಂಚಿನ ಹೊಳಪಿನ
ಯೋಗಿಯ ಕಣ್ಣಿನ ತೇಜವನು

ಅಡಗಿಸಿ ಅಡರುವ ಕಣ್ಣಿನ ತೇಜವೆ
ನೀ ಮಲಿನಾಂಶಿಸ ಯೋಗಿಯಲಿ

೨೧

ಕಾವ್ಯಮನೋಹರಕಾಮಿನಿಯಾಸವ
ಕೆಡಕದು ನಾಂಗೆ ಕುಸಲಿಯುವೆ
ಧರಣಿಯ ಖಗತತಿಯುಪವನ ಜರೆಯುವ
ಮಾಂಸನೆ ಜೀವಗೆ ಮಸಣವನು

೨೨

ಮಾಂಸಕೆ ಮೆಚ್ಚಿದ ಮಾನಸ ಕೋಟಿಯು
ಪ್ರೇಮವೆ ನಿನ್ನಯ ಮಾಂಸವನು
ಮಾಂಸಕೆ ಮಿಗಿಲದು ಮುದ್ದಿಗೆ ಮೂಲಿಕೆ
ಮೀರಿದ ಬೇನೆಗೆ ಮಾರಿಯದು

೨೩

ಸಾರುತ ಸವಿಯುವ ತೋಷಕೆ ಸೋವೃತ
ಸವಿಯುತ ಸುತ್ತಲಿ ಸತ್ತಿಹರು
ಬೆಳವನ ಪೊಲಿವನು ವಿಶಿಂಬಿರಿಯುವ
ಮುನ್ನನೆ ಗೆಯ್ದಿಹ ಪಾಪವಿದು

೨೪

ಆಡಿಕೆ ದಿನವಲಿ ಹುಟ್ಟಿದ ಹಕ್ಕಿಗೆ
ಹೋಗಲು ಹಾಡನು ಹಾಡುತಿಹ
ಬೇಡಿದ ಬಯಕೆಯ ನೀಡುವ ನಿನ್ನಯ
ಬೀಡನು ನೋಡಲು ಓಡುತಿಹೆ

೨೫

ತೀವಿದ ರಾಗದ ವೇಗದ ನಿಟ್ಟಿಗೆ
ನಲಿಯುತ ತೊನೆಯುತ್ತಲಿಯುವೆನು

ರಾಗದ ಸಿಟ್ಟನೆ ಸಿಡುಕಿಸಿ ಬೇಟೆಗ
ಕೋವಿಗೆ ಗುರಿಯಿಟ್ಟಿರಿಯುವನು

೨೬

ಬವರದ ಸುಳಿಯೊಳು ಭುವನವು ಸಿಲುಕಿರೆ
ಪ್ರೇಮಿಯನೆಲ್ಲಿಯು ಕಾಣದಿಹೆ
ಈಡಿನ ಸುರಿಮಳೆ ಗಡಣಕೆ ಸಿಲುಕಿರೆ
ಪ್ರೇಮಿಯು ಹಗೆಯೆಂದೋಡುತಿಹೆ!

೨೭

ಸವಿನೋಟದ ಒಳಸಂಚಿನ ಸೆರಗಿನ
ಮುಸುಕಿನ ಮಾನವ ನಾನಲ್ಲ
ಸವಿನೋಟದ ಒಳಮಿಂಚಿನ ಹೊಳಪಿನ
ಕಳೆಯನು ತಿಳಿಯಲು ನಾನಿಹೆನು

೨೮

ಸಿಳ್ಳಿಲೊ ಜೀವವೆ ಸಿಳ್ಳಿಲೊ ಮೊರೆಯೋ
ಸಿಳ್ಳಿಲಿ ನಲಿಯುತ ನೋಡುವೆನು
ಬೆದರಿದ ನೋಟದೆ ಥರ್ರನೆ ಹಾರಲು
ಬಳಲಿದ ಬೇಟೆಗ ನಾನಲ್ಲ

೨೯

ಸತ್ಯವ ಶಿವವನು ಸುಂದರತನವನು
ಮನದಲಿ ಮೊಳೆಯಿಪ ಮಳೆಯನ್ನು
ತೊರೆಯುತ ಬೆಳವಲ ಪೊಳಲನು ಸೇರುತ
ಆಳಲಿಗ ಗೆಳೆಯನ ತಣಿಪದಿಹೆ

೩೦

ಪಡುವಣ ಬೆಟ್ಟದ ಬೆಡಗಿನ ಸೆರಗಿನ
ಕಂಪರದಿಂಬಿನ ಮಂದಿರಕೆ

ಗೆಣೆಯರ ಗಡಣದೆ ಬಿನದದೆ ಸಾಗಿರೆ
ಸೆಳೆಯಿತು ನಿನ್ನಯ ದನಿಯೊಂದು

೩೧

ಗೆಳೆಯರು ಮೂದುತಿ ದದುರಸಕೇಳುತ
ಪಳಿಯುವನೊಲುಮೆಯೊಳೊಳಸೇರೆ
ಮಣಿಯದ ನೊಗದಿಂ ಮೂದುತಿ ನೋಡಿದೆ
ಮನವದು ನಿನ್ನಯ ಬಳಸೇರೆ

೩೨

ಇಂದಿಗು ಅಂದಿನ ಕಂದರದಿಂಬಿನ
ಕಾಸಿನ ದನಿಯೇ ಕೇಳುತಿದೆ
ಸುಖದುಃಖಂಗಳ ಮೋಳಕೆ ಸಿಲುಕದ
ನಿನ್ನಾ ಸೊಲ್ಲುಲಿ ಸೆಳೆಯುತಿದೆ

೩೩

ಕಾಲನು ಕಾಯದ ಬಾಳಕೆ ಸೀಮೆಯು
ಸೊಂಪನು ಸೂರೆಯು ಗಯ್ವುಹನೊ !!
ಜೇಟಿಯು ತೀಟಕೆ ಅಲಸದ ಮನುಜನು
ಈಡಿಗೆ ಮುದಮನು ಮಾಡಿಹನೊ !!

೩೪

ತಾಣವ ತೊರೆಯುತ ಗಾನವ ಗೆಯ್ಯುತ
ಸ್ವೈರದ ಸೀನೆಯ ಸಾಗಿಹೆಯೊ !!
ಕಾಣೆನು ನಿನ್ನಯ ಇರವನು ಸಾವನು
ಕಾಣುವೆ ಮಾಣದೆ ದನಿಯನ್ನೆ

೩೫

ಕಳೆವುವು ದಿನಗಳು ಋತುಗಳು ಕಳೆವುವು
ಕಳೆವುವು ಯುಗಗಳು ವಿಶ್ವದಲಿ

# ಬಡವರ ಕಾಮಧೇನು.

೧

ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ
ಬಾಲ್ಯದಲಿ ಪಶುಗಳನು ಸಲಹುತ್ತ ಬೆಳೆದೆ
ಬಳಿಕೆಯಾಗಿಹ ಪ್ರಾಣಿಬಳಗಂಗಳೊಡೆ
ವನಮೃಗಖಗಂಗಳನು ನೋಡುತ್ತ ನಲಿದೆ
ಜನಪದಂಗಳನೆಲ್ಲ ಬಳಸುತ್ತ ತಿಳಿದೆ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೨

ಬೇಡಾದ ವಸ್ತುಗಳ ಮೆಲುತಿರುವ ಪ್ರಾಣಿ
ಬೇಕಾದ ಗೆಯ್ಮೆಗಳ ಗೆಯ್ಯುತಿಹ ತ್ರಾಣಿ
ಕಡಿದಾದ ಗುಡ್ಡದಲಿ ಸಿಡಿದಾಗಿ ನಡೆವ
ಬಿರುಸಾದ ಮರಳಲ್ಲಿ ಸುಖವಾಗಿ ಸುಳಿವ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೩

ಇರುಕಾದ ಸರುವಿನೊಳು ಸರನಾಗಿ ಸಾಗಿ
ಎರೆಯಂಗೆ ತೋಷವನು ಬೀರುತ್ತ ಸಾರಿ
ಪರಿಚರ್ಯೆಕೈಕೊಂಬ ಪರಿಯನ್ನು ಕಳೆದು
ನಿಷ್ಕಾಮ ಕರ್ಮವನು ಮನದಿಂದ ಮಾಳ್ಪ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೪

ಹೊರೆಯನ್ನು ಹೇರುವ ಪರಿಯನ್ನು ತಿಳಿದು
ಕೊರಗುತ್ತ ಕರಗದಲಿ ಮನವನ್ನು ಬಿಗಿದು

## ಮುಗಿಲು.

ಎರೆಯುಂಗೆ ಎರೆಯುಳಿಗೆ ಹರುಷವನು ತರುವ
ಕಷ್ಟದಿಂ ಕಾಯುವನು ನೂಕುತ್ತ ನಡೆವ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೫

ಕಲ್ಲನ್ನು ಕಾಳನ್ನು ಕಟ್ಟಿಗೆಯು ಹೊರೆಯು
ಮಣ್ಣನ್ನು ಮುಂತಾಗಿ ಒಯ್ಯುತಿಹ ಪರಿಯು
ಕಾಸನ್ನು ಕಳೆಯದಲೆ ಸಾಕುತಿಹ ಬಗೆಯು
ಪಶುಜೀವ ಕೋಟಿಯಲಿ ಬಡಜನರ ಸಿರಿಯು
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೬

ಗುಜರಾತ ನಾಡಿನಲಿ ಜನರಾಡಿಕೊಳುವ
"ರಾವಣನ ಗಡಿಯಾಳ" ಬಿರುದಾಗಿ ಮೆರೆವ
ಪ್ರತಿ ಮೂರು ತಾಸಿನಲಿ ಪರಮನನು ಸ್ಮರಿಸಿ
ಧರೆಗೊಂದು ಗಡಿಯಾಳ ತೆರನಾಗಿ ಮೆರೆವ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೭

ಸ್ವರವನ್ನು ಕರ್ಕಶದ ಕಣಿಯಿಂದು ಬಗೆವ
ಮರವೆಯನು ಬಡಪಾಯಿ ಮತಿಯಿಂದು ತಿಳಿವ
ಗುರುತರದ್ರೋಹವನ್ನೆಸಗುತ್ತ ನರರು
ಮನಬಂದ ತೆರದಲ್ಲಿ ದೂರುತ್ತಲಿರುವ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

# ಮುಗಿಲು.

೪

ಮಾನವ ಪಸುಳೆಯು
ಮನ್ನಣೆಪಡೆಯದೆ
ವನಕೇಸರಿಹುಲಿಕರಡಿಗಳ
ಹನನಾಟೋಪಕೆ
ಹೈರಣವಾಗುತ
ವನಗಿರಿಗವಿಗಳನಾಶ್ರಯಿಸೆ

೫

ಹೊಳೆಯಿತು ಜೀವನ
ಕಲಹದ ಬೀಜವು
ಆಳಲಿಗೆ ಸಿಲುಕಿದ ಮಾನವಗೆ
ಅಳವಿಯ ಸುಳಿಯೊಳು
ಗೆಲವನು ಕಾಣಲು
ಮೊಳೆದವು ಕಲಿಗಳ ಮೇಳಗಳು

೬

ಸಮರದ ಸುಳಿಯೊಳು
ಸದನಗಳೆದ್ದವು
ಸಮರದ ಸುಳಿಯೊಳು ಹಳ್ಳಿಗಳು
ಸಮರದ ಸುಳಿಯೊಳು
ಪೊಳಲುಗಳೆದ್ದವು
ವಸುಮತಿಯುದಯಿಸೆ ಸಮರದಲಿ

೭

ಜೀವನ ಕಲಹದ
ಘೋರಾಕಾರವು
ನಗರದ ನೆಳಲಲಿ ನೋಡುತಿರೆ.

## ಮುಗಿಲು

ಒಗುಮಿಗೆಯುಗುತಿಹ
ಕಾರಣಕಾಣಲು
ಕನಸಿನ ಸೃಷ್ಟಿಯು ಸಾಲದಿದೆ

೮

ಸಿರಿಸಂಪತ್ತಿನ
ಪುರಜನವೆಲ್ಲವು
ಮೆರೆಯಲು ಮುಗಿಲನು ಮಾರ್ಮಲೆದು

ಅಡರುವ ನೆಲೆವನೆ
ಗಡಣವ ನೋಡಲು
ಬಡವರ ಕೊಳೆ ಸಿಡಿದಾಡುತಿದೆ

೯

ಆಳುಮಗಂದಿರ
ಸಾಲನು ಸೇರಲು
ಕಾಲನ ಕಳಸವು ಕಾಣುತಿದೆ

ಕುದಿಯುವ ಕೋಪಕೆ
ಕರಗುವ ಕರುಳಿಗೆ
ಕೊನೆಯನು ಕಾಣೆನು ಮುಗ್ಧತೆಗೆ

೧೦

ಪೇಳುವುದಾರಿಗೆ
ಆಳುಮಗಂದಿರ
ಗೋಳನು ಪೊಳಲಿನ ಜನರಿಂಗೊ ?

ಕೇಳರು ಕೇಳರು
ಕಂಡರು ನೋಡರು
ನೋಡಿಯು ನೆಟ್ಟನೆ ನಡೆಯುವರು

೧೧

ಕಾಣೆನು ಸೊಗವನು
ಜನಸಾಮಾನ್ಯದೆ
ಮೌನದ ನಿರುಕಿಸಿ ಕಾಣುತಲಿ

ಕಂಡೆನು ಸುಳಿಯುವ
ಜನಮಂಡಲವನು
ಕಾಣದ ಕೇಳದ ಕವನದಲಿ

೧೨

ಪುರಗಳ ಸುತ್ತಿದೆ
ಜನಗಳ ಬಳಸಿದೆ
ಕನಸಿನ ಪದಗಳ ಪೇಳಿದೆನು

ಕವನದ ಮಾತಿನ
ಕವಣೆಯು ಜನರನು
ಹುಲಿಸರೆ ಮನಸದು ಬಾರದಿರೆ

೧೩

ಪುರಜನಸ್ಪಂದದ
ಕರಣೆಯು ನಿರುಕಿಸೆ
ಸ್ವಾರ್ಥಸಮಾಧಿಯ ಸೀಮೆಯಲಿ

ಸೆರೆಗೊಳ್ಳದೆ ಮನ
ಕರಗುವ ಬಗೆಯಲಿ
ಜಗವನು ಮೆಚ್ಚಿಸ ಜನಕಾಣೆ

೧೪

ಸುಂಟರ ಗಾಳಿಯು
ಕಾಣುವೆನೊಂದೆಡೆ
ಕಂಪಿತ ಕಾಮಿನಿ ಸೆರೆಗಯ್ವ

# ಮುಗಿಲು.

ಬಂಟರ ಬವಣೆಯ
ನೋಡುವೆನೊಂದೆಡೆ
ಜೀವನ ಕಲಹಕೆ ಬಿಸುಸುಯ್ವ

೧೫

ಓರೆಯ ಪ್ರೀತಿ
ಬಿಸಿಲಿನ ತರುಣೆಯ
ನಾಣನು ಬಿಟ್ಟಿಹ ನಡೆಯನ್ನು
ನೋಡುವೆ ಪ್ರೀತಿ
ಗೂಡಿನ ತರುಣರ
ಮೋಹದೊ ನಗರದ ಸಂದಿಯಲಿ

೧೬

ಬಾಳಿನ ಗೋಳಿಗೊ
ಬಾಳಿನ ಗೆಲುವಿಗೊ
ಕಾಲದ ಮುಯ್ಯಿಗೊ ಸಾಯುವರ
ಮೇಲಣ ಕೆಳಗಣ
ವರ್ಗಗಳೆನ್ನದೆ
ಪ್ರೇಮಲಿನ ಸ್ವಾದೆ ಪೂಗಿಸುವರು

೧೭

ವ್ಯಸನಸಮಾಧಿಯೊ
ಕೊನೆವಲೆಮಾಡುತ
ವಸುಮತಿವನಿತಾಂಗಣಗಳನು
ಮದಿರಾ ಪಾನದ
ಮದಿಸಿದ ಮಲೆಯನು
ಕಂಡವ ತುಂಡಿನ ದಿಂಡೆಗಳ

## ಮುಗಿಲು.

೧೮

ಕಡಿಕಡಿದಗಿಯುವ
ತುಡಿಕುಡಿದೇಳುವ
ಮಿಡಿಮಿಡಿದಮರುವ ಜನಗಣದಿ

ಹಣದಬ್ಬರಣೆಯು
ಭೀಕರ ರಾಕ್ಷಸ
ರೂಪವು ತಾಂಡವನಾಡುತಿದೆ

೧೯

ಪುರದೀ ತಿರೆಯಲಿ
ನರಕದ ಬೀಜವು
ನರಕವು ನೆಲದಲಿ ಕಾಣದಿರೆ

ಕರೆಯುವ ಕೇಳುವ
ಜನರನು ಕಾಣೆನು
ಅಳಲಿಗ ನೆಳಲನು ಹಾರೈಸಿ

೨೦

ವಿಧವಾಸದನದ
ಕಾಂಜಿನ ನಗರದ
ನೀತಿಯು ತಳಹದಿಶಿಲೆಯಲ್ಲಿ

ಅಟ್ಟವನೇರುತ
ಪಾಪದ ತಾಪದ
ಮನ್ನಿಯರನು ನಾ ನೋಡುತಿಹೆ

೨೧

ಕ್ರೂರ ಮನುಷ್ಯರ
ಹೀರಕದತ್ವದ
ಸಾರುವ ವಿಧವಾಸದನಗಳ

ಮುಗಿಲು.

ನೀತಿಯು ಗುರಿಯನು
ಅರಿಯಲು ಮರುಗುವೆ
ಜಾತಿವಿಶೇಷದ ಮಹಿಮೆಯಲಿ

೨೨

ರಾಷ್ಟ್ರೀಯ ಭಾವನೆ
ತುಂಬುತ ತುಳುಕುವ
ಮಹಿಳೆಯು ಪ್ರೇಮಲಲಿ ಅಳಿಯುತಿರೆ

ಮಾತೆಯು ಸೀತೆಯು
ಜಿಲಿಸಿಲಿಕಂಪಂ
ಸೂಸುತ ಸೆಣಸುವ ಸತಿ ವಿರಳ

೨೩

ಅಬಲಾವಿದ್ಯಾ
ಶಾಲೆಯ ಸಾರುತ
ತುಂಬಿದ ತೋಷಕೆ ವೈಮರಿಪೆ

ಸುಲಭಾ ಸೀತಾ
ಕಾಂತಾಮಣಿಗಳ
ಶೋಭನು ಕಾಣಲು ಹಾತೊರೆವೆ

೨೪

ಜನರಾಡಂತದ
ಘನತರ ಸಂಸ್ಥೆಗ
ಳನು ಸಂದರ್ಶಿಸಿ ಸಂತಸಪೆ

ತೋಷವು ಸಾಸಿತು
ಚಿಂತೆಯು ಮುಂಚಿತು
ಜಾತಿಮಾಹಾತ್ಮ್ಯವು ಪೀಡಿಸಿಯೆ

## ಮುಗಿಲು.

೨೫

ಆಹಾ! ಭಾರತ
ಮಾತೆಯ ಮೊದಲಿನ
ತಾಪಸ ವನಗಳ ಶಾಂತಿಸೆಲೆ

ಸಂಚಿನ ಹೊಂಚಿನ
ಪಡುವಣ ಸಂಸ್ಕೃತಿ
ಬರಹದ ಬಹುಳಕೆ ಬಯಲಾಯ್ತೆ !!

೨೬

ಶಾಂತಿಯ ಸಾರದ
ಅಡಿಗಲ್ಲಾಗಿಹ
ಪುಣ್ಯಾಶ್ರಮಗಳ ವಿದ್ಯೆಯನು

ಬಸಿಸಿ ಸತ್ತ್ವದ
ಶಿವಸೌಂದರ್ಯದ
ಸಲಹಿದ ಘನತಪಋಷಿಗಳನು

೨೭

ಕಾಣೆನು ಸ್ಕೂಲಿನ
ಕಲೆಗಳ ಸುಳಿಯುವೆ
ಕಾಣುವೆ ಮಾಣದೆ ಕಲಹಗಳ

ಕೆಸರ್ಗಲ್ಲಾಗಿಹ
ಹೊಸಪರಿ ಬಲುಸವಿ
ಮುಸುಕಿನ ಮಾಟದ ವಿದ್ಯೆಯನು

೨೮

ಕಾಣುವೆ ಕರ್ಮದ
ಭೂಮಿಯ ಮರ್ಮವ
ಪರಿಕಿಸೆ ಪರಿಪರಿ ದೃಷ್ಟಿಯೊಳು

ಪ್ರೇಮದ ಸೆಳೆಯಿಂ
    ತ್ಯಾಗದ ತೊರೆಯಿಂ
        ಗರ್ಜಿಪ ಭೋಗದ ಸಾಗರವೆ

೨೯

ಸಮರಸವೆಂಬರು
    ಸಮಸ್ಥಿತಿಯುದಯಕೆ
        ಸಮರಸವಲ್ಲವು ಸಪ್ರೇಮ

ಕಲಹಂಗಳ ಸಮ
    ರಸಮೊಸಗಾಡಲು
        ಸಮಸ್ಥಿತಿಯೊಸಗೆಯ ಸಾರುತಿದೆ

# ಬಡವರ ಕಾಮಧೇನು.

೧

ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ
ಬಾಲ್ಯದಲಿ ಪಶುಗಳನು ಸಲಹುತ್ತ ಬೆಳೆದೆ
ಬಳಿಕೆಯಾಗಿಹ ಪ್ರಾಣಿಬಳಗಂಗಳಿಂದೆ
ವನಮೃಗಖಗಂಗಳನು ನೋಡುತ್ತ ನಲಿದೆ
ಜನಪದಂಗಳನೆಲ್ಲ ಬಳಸುತ್ತ ತಿಳಿದೆ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೨

ಬೇಡಾದ ವಸ್ತುಗಳ ಮೆಲುತಿರುವ ಪ್ರಾಣಿ
ಬೇಕಾದ ಗವ್ಯಗಳ ಗಯ್ಯುತಿಹ ತ್ರಾಣಿ
ಕಡಿದಾದ ಗುಡ್ಡದಲಿ ಸಿಡಿದಾಗಿ ನಡೆವ
ಬಿರುಸಾದ ಮುಳ್ಳಲ್ಲಿ ಸುಖವಾಗಿ ಸುಳಿವ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೩

ಇರುಕಾದ ಸರುವಿನೊಳು ಸರಸಾಗಿ ಸಾಗಿ
ಎರೆಯುಂಗೆ ತೋಷವನು ಬೀರುತ್ತ ಸಾರಿ
ಪರಿಚರ್ಯೆಗೈಕೊಂಬ ಪರಿಯನ್ನು ಕಳೆದು
ನಿಷ್ಕಾಮ ಕರ್ಮವನು ಮನದಿಂದ ಮಾಳ್ಪ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೪

ಹೊರೆಯನ್ನು ಹೇರಿದುವ ಪರಿಯನ್ನು ತಿಳಿದು
ಕೊರಗುತ್ತ ಕರಗದಲೆ ಮನವನ್ನು ಬಿಗಿದು

## ಮುಗಿಲು

ಎಳೆಯಂಗೆ ಎಳೆಯಳಿಗೆ ಹರುಷವನು ತರುವ
ಕಷ್ಟದಿಂ ಕಾಯುವನು ನೋಡುತ್ತ ನಡೆವ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೨

ಕಣ್ಣಿನ್ನು ಕಾಳನ್ನು ಕಟ್ಟಿಗೆಯ ಹೊರೆಯ
ಸುಗ್ಗಿಯನ್ನು ಮುಂತಾಗಿ ಒಯ್ಯುತಿಹ ಸಿರಿಯ
ಕಾಸನ್ನು ಕಳೆಯುವಲಿ ಸಾಕುತಿಹ ಬಗೆಯ
ಹಬಜೀವ ಕೂಟಿಯಲಿ ಬಡಜನರ ಸಿರಿಯ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೩

ಗುಜರಾತ ನಾಡಿನಲಿ ಜನರಾಡಿಕೊಳ್ಳುವ
"ರಾವಣನ ಗಡಿಯಾರ" ಹೆಸರಾಗಿ ಮೆರೆವ
ಪ್ರತಿ ಮೂರು ತಾಸಿನಲಿ ಪರಮನನು ಸ್ಮರಿಸಿ
ಧರೆಗೊಂದು ಗಡಿಯಾರ ತೆರನಾಗಿ ಮೆರೆವ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೪

ಸ್ವರವನ್ನು ಕರ್ಕಶದ ಕಣೆಯಿಂದ ಒಗೆವ
ಮರಣವನು ಬಡಪಾಯ ಮತಿಯಿಂದ ತಿಳಿವ
ಗುರುತರದ್ರೋಹವನ್ನೆಸಗುತ್ತ ನರರು
ಮನಬಂದ ತೆರದಲ್ಲಿ ದೂರುತ್ತಲಿರುವ
ನಾ ಕಂಡ ಜೀವಿಯನು ಭೂಖಂಡವೆಲ್ಲ
ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

# ಮುಗಿಲು.

೮

ಆರಯ್ಕೆ ಹಾಲುಂಡವರಿಯಿಂದ ತೀಡು
ಪಿರಿರ್ದ ಬಾಲಗ್ರಹಂಗಳನು ತರಿದು
ಸೇರಿರ್ದ ಕಾಲನುರು ಸಂಕಲೆಯ ಕಡಿದು
ಸೆಟೆದಿರ್ದ ಶಿಶುವನ್ನು ಸುಖವಾಗಿ ನಗಿಪ
    ನಾ ಕಂಡ ಜೀವಿಯನು ಭೂಬಿಂಬವೆಲ್ಲ
    ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೯

ಕಿವಿಸೆಟ್ಟಿಗಟ್ಟಿರುವ ಮುಖವನ್ನು ನೋಡಿ
ಬೆರಗಾಗಿ ಮನದಲ್ಲಿ ಮುದದಿಂದ ಕೂಡಿ
ಮೂಡಿರ್ದ ಬಾಳೆಗಳ ಗೊನೆಯಂತೆ ಕಾಂಬ
ತುಂಬಿರ್ದ ಸರಳತೆಯು ತುಳುಕುತ್ತಲಿರುವ
    ನಾ ಕಂಡ ಜೀವಿಯನು ಭೂಬಿಂಬವೆಲ್ಲ
    ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೧೦

ಮಹಾತ್ಮ ಯೇಸುವನು ದೊರೆಯಾಗಿಯೊತ್ತ
ಹಿರಿದಾದ ಸ್ವರಣೆಗೆ ನೆಲೆಯಾಗಿ ನಿಂತ
ಗಂಗಾತರಂಗಗಳ ತಟಗಳಲಿ ಮಿಂದು
ಕಂಗೊಳಪ ಹಿಮಗಿರಿಯ ದರಿಗಳಲಿ ನಿಂದು
    ನಾ ಕಂಡ ಜೀವಿಯನು ಭೂಬಿಂಬವೆಲ್ಲ
    ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

೧೧

ತಿಪ್ಪೆಯುಪ್ಪರಿಗೆಗಳ ಹೊಲಬನ್ನು ತೀಡು
ಬಡವಂಗೆ ನೆರೆಕಾಮಧೇನುವಾಗಿರುವ
ನಿಷ್ಕಾಮ ಕರ್ಮವನು ಕಲಿಸುತಿಹ ಋಷಿಯ
ಸತ್ಕಾರ್ಯ ಮಹಿಮೆಯನು ಸಾರುತಿಹ ಸಿರಿಯ
    ನಾ ಕಂಡ ಜೀವಿಯನು ಭೂಬಿಂಬವೆಲ್ಲ
    ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ

# ಬಗನಿಯ ಮರ.

೧

ಇರುಳಲಿ ಅಗ್ನಿಯು ರಕ್ಷನಲಿ ಬರುತಿರೆ
        ಘೋರಾರಣ್ಯದ ಮಧ್ಯದಲಿ
ಅರಬ್ಬೈಲೆಸ್ಸಿನ ಗುರುತರ ವನಗಿಂ
        ದರಿಯಲಿ ರಥವದು ಸಾಗದಿರೆ

೨

ಕೊರಗುತ ರೇಗುತ ಮರುಗುತ ಪೊರಮಡೆ
        ಬನಸಿರಿ ಬಗನಿಯ ಬನಗಳನು
ಕಾಣುತ ಸನಿಹದೆ ಕುಣಿಯುವ ಮನದಿಂ
        ಮಾಣದೆ ಮನವಣಿಯಿಂ ನೋಡೆ

೩

ಗೊನೆಗಳ ಸೊಂಪಿದೊ ಹೆದೆಗಳ ಬೆಡಗಿದೊ
        ಚಮರಿಯ ಹೋಲುವ ಜಡೆಗಳಿವೊ
ಕಳಸದ ಕೇತುವ ಹೋಲುವ ಕವಲಿನ
        ಎಳೆಗರಿ ಬೆಳಸಿರಿ ಹೊಳಪುಗಳೊ

೪

ತಳೆದಿಹ ಚಲುವಿನ ಗರಿಗಳನಾರಯೆ
        ವಿಧಿ ತಾ ಸೇವನ ಬರೆವುದಕೆ
ಪೂರ್ವದೆ ಧರಿಸಿದ ಗರಿಗಳ ಧರೆಯೊಳು
        ನರರಿಗೆ ಮೊರೆಕೊಳೆ ತೊರೆದಿಹನೊ

೫

ಎಲೆ ಗರಿ ನೀನಿಳೆಯೊಳು ನೆಲಸಿರದಿರೆ
        ಬಳಕೆಯು ಸೊಲ್ಲನು ಬರೆದಿರಿಸಿ
ಇಳೆಯೊಳು ಕಲೆಗಳ ಹೊಲಬನು ತಿಳಿಸುತ
        ಬೆಳಸುವ ಗೆಳೆಯನ ಕಾಣದಿಹೆ

## ಮುಗಿಲು.

೬

ತೂಕದ ದಂಡೆಗೆಗೊನಕೆಯು ದಿಂಡಿಗೆ
ಈಸಿನ ಕಸುವಿನ ಕಂಬಿಂಗೆ
ಹೊಲವನು ಹಸನವ ಮಾಡುವ ಹಲಿಗೆಗೆ
ಕಸುವನು ಕೊಡುತಿಹ ಕೋಲಿಂಗೆ

೭

ನೇಗಿಯು ಹಲಿಗೆಗೆ ಅಣೆಗಳ ಕೋಲಿಗೆ
ಮಿಂಚಿನ ದೀಪದ ಕಂಬಿಂಗೆ
ಕೆಚ್ಚಿಂ ಕೂಡಿರೆ ಬಳಸುವ ಕೆಲಸಕೆ
ಬಲುಹಿತ ಗೆಯ್ಮೆತ ಬಾಳುವುದು

೮

ಮದಿರಾ ಪಾನವ ಪಮೇಳದೆಯೊದಗಿಪ
ಸದನವೆ ವಸುಧೆಗೆ ತಾನಾಗೆ
ಕೆದರಿದ ಗರಿಗಳ ಸಂದಿನ ಗೊನೆಗಳು
ಮದನನ ಮನಸಿನ ಮರಹುಗಳೊ

೯

ಸಭೆಗಳ ಸೇರುವ ಸದನಕೆ ಸೊಂಪಿಡೆ
ಬೆಡಗಿನ ಹೆಡೆಗಳ ತೊಡಹುಗಳ
ತೊಡಿಸಲು ಜನಪದ ಜನಗಳ ಮನವನು
ಬಿಡದಲೆ ಬಲ್ಪಿಂ ಸೆಳೆಯುವುದು

೧೦

ಬಾಳೆಯ ಸುಳಿಯಲಿ ಏಳುವ ಗೊನೆಯಿಂ
ಬಾಳಿಗೆ ಬಾಳಿನ ಕೊನೆಯಹುದು
ಸುಳಿಗೊನೆಯೇಳಲು ಬಗನಿಯ ಮರಕದು
ಭವಸಂಸಾರದ ಕೊನೆಯಹುದು

೧೧

ಎಲೆ ಮರ ಜನಹಿತ ಮನದಿಂ ಮಾಡುತ
ಜನಪದ ಜನಗಳ ಮನವೊಲಿಪೆ
ಜೀವನು ಕೊಚ್ಚುತ ಕೊರಳನು ಹಿಚುಕುವ
ನರರನು ನೋಡಿಯು ನಗುತಿರುವೆ

---

## ಕೋಗಿಲೆ.

೧

ಬಾರೆಲೆ ಕೋಗಿಲೆಯುಲಿಯುತ ಬನದೊಳು
ತಾರೆಲೆ ಮೋದವ ಮೇದಿನಿಗೆ
ಹಾಡೆಲೆ ಬಹುವಿಧ ರಾಗದೆ ನರರನು
ತೇಲಿಸಿ ಕುಣಿಸೆಲೆ ಲೀಲೆಯಿಗೆ

೨

ಕುಡಿಗೊನರಿಲ್ಲವು ಗಿಡಗಳ ಮಡಲೊಳು
ಬಿಡವೆಲೆ ಕಾಣುವೆ ಕೋಗಿಲೆಯೆ
ತಡವನು ಮಾಡದೆ ಒಡನೆಯೆ ನಯನುಡಿ
ಬೆಡಗನು ಬಿಡಿಸೆಲೆ ಬಿಂಕದಲಿ

೩

ಬೇಸಿಗೆ ಕಾಲನು ನಲವಿಂದಿಡುತಿದೆ
ಮಾಗಿಯು ಮುಗ್ಗುತ ಮುದಿಯುತಿದೆ
"ಕುವೋ ಕುವೋ" ಸವಿದನಿ ಸೂಡೆಯನು
ಬೀರುತ ಬಾರೈ ಕೋಗಿಲೆಯೆ

# ಮುಗಿಲು

೪

ಕೇಳಿದೆ ಕೇಳಿದೆ ಕೆಲಬಲಕುಲಿಯುವ
"ಕೂವೊ ಕೂವೊ" ಮೆಲುದನಿಯ
ವಸಂತ ಸಮಯವು ಸಮನಿಸಿದೊಸಗೆಯ
ವಸುಮತಿ ದಿಶೆದಿಶೆಗುಸಿರುತಿದೆ

೫

ಏನಿದು ಗಾನವೊ ಸುಮನೋಹರವೊ!
ರಸಋಷಿರಸನೆಯೊಳೊಸರುವರಸವೊ!
ನಿಶೀಥ ಸಮಯದ ನಿಶಾಂತ ಸನವೊ!
ವಸುಮತಿ ದೇವಿಯ ಸುಗ್ಗಿಯ ಸೊಗವೊ!
ವಸಂತ ರಮಣಿಯ ನಿನದದ ನಯವೊ!
ರತಿಯುತ ಸತಿಮಣಿ ಸುಸಿಲಿನ ಸನವೊ!
ಪಸುಳೆಯ ಮುದ್ದಿನ ಮಾತಿನ ಮುದವೊ!!

ಕಾಣುವೆ ಕೇಳುವೆ ಕೆಲಬಲದಲ್ಲಿ
ಕುಣಿಕುಣಿದಾಡುವ ತಣಿಸೇಳಲ್ಲಿ
ಚೆಲುವಿನ ಮೃದುತನ ಮನಸಿರಿಯಲ್ಲಿ
ಬಳಲಿಕೆ ಬಾರದ ತೋಳಲಿಕೆಯಲ್ಲಿ
ತಿಳಿಯುದಲಿಂಪಿನ ಮೆಲುದನಿಯಲ್ಲಿ
ತಿಳಿಗೊಳದಲರಿನ ಪರಿಮಳದಲ್ಲಿ
ಮುಳುಗುವೆ ಸಂದದ ಸಂತಸದಲ್ಲಿ

೬

ನುಡಿತಡೆಬಿಡುಗಡೆ ಪಡೆಯುವ ಸಮಯದೆ
ನುಡಿಯುವ ನುಡಿಯನುಕರಿಸದಿಹೆ
"ಕುವೊ ಕುವೊ ಕರ್ರೀ" ಎನ್ನುತ ಸಾರಲು
ನಾಡಿನ ಬಿಡುಗಡೆ ಕಾಣದಿಹೆ

## ಮುಗಿಲು

೭

ಕವಿಗಳ ಕಣ್ಣೊಳು ಕುಣಿಕುಣಿದಲೆಯುವ
ಮಾವಿನ ತಳಿರೊಳೆ ತಣ್ಣಿರದೆ
ತರುಗಳ ಭೇದವ ಹೃದಯದೆ ತಾರದೆ
ಚಲುವಿನ ತಳಿರನು ಮೆಲುತಿರುವೆ

೮

ಬೇವಿನ ಕಿಸಲಯ ಹಸುರೆಲೆ ಬೀಡೊಳು
ಮಂಚದ ಮೇಲೆಯೆ ಮಲಗಿರಲು
ಬೆಳಗಿನ ಗಳಗೆಯೊಳುಲಿಯುತ ಮೆಲುದನಿ
ತಪ್ಪದೆ ತಲೆಯನು ತೊನೆಸುತಿಹೆ

೯

ಸವಿದನಿಯೆಸಕವನೊಸದೊಸೆದಾಲಿಸೆ
ಬಾಲ್ಯದೆ ತೇಲಿಸಿ ಕುಣಿಸುತಿಹೆ
ಶಿಶುತನದೊಸಗೆಯ ಹೊಸದಾಗೇಳಿಸಿ
ಬಿಸಿಬಿಸಿಯುಸಿರನು ಬಿಡಿಸುತಿಹೆ

೧೦

ತಾಯಿಯ ತಾಯ್ನುಡಿ ತಂದೆಯ ತನಿನುಡಿ
ಕೋಗಿಲೆ ಬಗ್ಗಣೆ ಹಾರೈಸಿ
ಕುಣಿಯುತ ಕುಲುಕುಲು ನಗುತಿಹ ದಿನಗಳ
ನೆನಪೇ ನೋವಿನ ಸೀಮೆಯಲಿ

೧೧

ದನಿಯನು ಬದಲಿಸಿ ಪದುಳದೆ ಹಾಡುವ
ಹದನವ ಕಲಿಯಲಿ ತೂಗುತಿರೆ
ಚಮರನು ಜಗದೊಳು ಜನರುಚಿಯರಿಯುತ
ಬದಲಿಪ ನಡೆನುಡಿ ನಟಿಸುತಿಹೆ

## ಮುಗಿಲು.

೧೨

ಬಾನೊಳು ಮುನಿದಿರುವಿನಿಯಳ ಬೆನ್ನೊಳು
ಪ್ರಣಯದ ತನಿಸೊದೆ ಸೂಸುತಲಿ
ಓಸನು ಓಪಳ ಕೆಳೆಯನು ಕೇಳುತ
ತರುಗಳ ಬಳಸುತ ತೇಲುತಿರೆ

೧೩

ಸ್ಮೃತಿಪಥಕೇಳುವ ಮುನಿದಿಹ ನಲ್ಲೆಯ
ಚಿತ್ರವ ರೂಪಿಸಿ ನಲಿಸುತಿದೆ
ನಲ್ಲನ ನಲ್ಲೆಯ ಲಲ್ಲೆಯ ಸೊಲ್ಲಿನ
ಮೆಲುದನಿ ಸೊಂಪನು ಸೂಸುತಿದೆ

೧೪

ಕಾಡಿಗೆ ಕಪ್ಪಿನ ಮೋಡದ ಬಣ್ಣವ
ಬರಸೆಳೆದಾಡುವ ಒಡಲಿಂದೆ
ಮೂಡುವ ನಯನುಡಿ ಗಾಡಿಯ ನೋಡಲು
ಪೊಡವಿಯ ಮಾಧ್ಯದೆ ಕೆಡಹುತಿದೆ

೧೫

ಪುಚ್ಛವನೇಳಿಸಿ ಬೀಳಿಸಿ ಕೆಲೆವುದ
ನೊಚ್ಚರಿಗಂಗಳು ನೋಡುತಿರೆ
ಒನಪಿನ ಉಯ್ಯಲೆಯಾಂತಿಹ ಭುವನದೆ
ಕುಳಿತಿಹ ದೇವನ ನಾದಮಿದೊ

೧೬

ಪೊಡವಿಯೊಳಡಗಿಹ ಶಕುನಿಯ ಸೃಷ್ಟಿಯ
ದಿಟ್ಟಿಸಿ ನೋಡಲು ನುಡಿಗಳನು
ತರತಮಭಾವದೆ ಕಾಲದೆ ಕಾಲದೆ
ಕೆಲೆಯುತ ಕೆಲಬಲ ಕಲೆತಿಹವು.

# ಮುಗಿಲು.

೧೭

ನಾಕಾಧೀಶನ ಗಮನವನೆಣಿಸದೆ
ತುಂಬುರನೆಂಬುವ ಕಿನ್ನರನು
ವೀಣೆಯ ಗಾನದ ನಾದದೆ ನಾಂದಿರೆ
ಶಾಪವು ಪಿಕವನು ರೂಪಿಸಿತೊ

೧೮

ಶಾಪವಿಮೋಚನೆ ಯಾಚಿಸಿ ಕೇಳದೆ
ಶೋಕವ ಮಾಡದೆ ಭೂತಲದೆ
ಕೋಗಿಲೆಯಾಗಿರೆ ಮಾಗಿಯ ಬೇಟಗ
ಸೀಗದ ನಿಡುಸರ ತುಡುಕಿಹನೊ

೧೯

ವರ್ಷಾಕಾಲದ ನೆರೆ ಪಿಂದಕ್ಕಿ
ಎಂದಾದರು ಪದ ಪಾಡುತಿದೆ
ಸಂದಿದ ಮಾತನು ಪೊಂದಿಸಿ ಹಂಬಲಿ
ಮಾಡುವವನುಚಿತವೆನ್ನುತಿದೆ

೨೦

ಕಾರಿನ ಕಾಲದೆ ಕೋಗಿಲೆಯುಲಿಯನು
ಕೇಳುತ ಬಂದೆನು ಕೆಲವುಕಡೆ
ರಾಗದೆ ರಾಗದ ತೂಗುತ ಕೂಗುವ
ವೇಗಕೆ ಬೇಗವು ಬೀಳುತಿದೆ

೨೧

ವಸಂತಸಮಯದ ಸವಿದನಿಯೆಸಕವ
ವಸುಮತಿಗೂಡಿಸಿ ನುಡಿಸದಿದೆ
ನಿಶಿಯೊಳು ದಿನದೊಳು ಕೇಳದ ಕಿವಿಯಾ
ಸುಖವದು ಸಾರಿತು ದೆಸೆದೆಸೆಗೆ

೨೨

ಕುಗ್ಗಿದ ಕಂಠದೆ "**ಕುವೊ ಕುವೊ**" ಎನ್ನುವ
ಹಿಗ್ಗದ ಕೂಗನು ಕೇಳುತಿಹೆ
ಸಗ್ಗದ ಸುಖದಾ ಸೊದೆಯನು ಸವಿದಿಹ
ಹಿಗ್ಗಿದ ಮನವದು ಮುದುಡುತಿದೆ

೨೩

ಜಗದೊಳು ಜೀವಿಗೆ ಸುಖದುಃಖಂಗಳು
ಬಿಡದಿಹ ಕರ್ಮವು ಎನುತಿರುವೆ
ಹಗೆ ಸಮ ಭಾವನ ತಳೆಯುತ ಕಳೆವುದು
ಲೋಕದೆ ಮೇಲೆಂದೆನುತಿರುವೆ

---

## ಬೂದಿಯ ಬೆಳವ ಮತ್ತು ಕೋಗಿಲೆ.

೧

ತಾರಿನ ತಂತಿಯ ಮೇಲೆಯೆ ನಲಿಯುತ
ತಾನವ ತೀಡುತ "**ಕುಕೂಕು**"
ನಾದವನೆಬ್ಬಿಸಿ ಬೂದಿಯ ಬೆಳವನು
ಮೇದಿನಿ ಮೈಸಿರಿ ಮೆರಸುತಿದೆ

೨

ಒಲವಿನ ಬೇವೊಳು "**ಕುವೋಽ**" ಎನ್ನುತ
ರಾಗದ ಕೋಗಿಲೆ ಕೂಗುತಿದೆ
ಇನಿದನಿಯೆರಡನು ಮನದಿಂದಾಲಿಸೆ
ಹರಣವು ಹರುಷದೆ ಹಾರುತಿದೆ

# ಮುಗಿಲು.

೩

ಚಿತ್ರಸುಮೊಂದೇ ಇಂಚರವೊರದೇ
ಮಿಂಚಿನ ನೋಳ್ಪೆ ಬೆರೆಯುತಿಪೆ
ವಿಶ್ವಾಧೀಶನ ದೇಹಾನಂತ್ಯದ
ಲೀಲೆಯ ಸೊಲಬನು ತೋರುತಿಪೆ

೪

ಚದುರನಗಳನಾ ಚದುರಿಂಯಾಲಿಕೆ
ಕೊನೆಯಲಿ ಕಾನನ ಸೀಮೆಯಲಿ
ಕುಳಿತೋಲಾಪುತ ಕೇಳುವೆನೊಂದನೆ
ಇರವನು ಸುರಿದಿಪ ತಿರೆಯಲ್ಲಿ

---

# ಮುಳ್ಳುಗಳ್ಳಿ.

೧

ಮುಳ್ಳುಗಳ್ಳಿ ಒಳಿಯೆ ನೀನು
ಕಳ್ಳಕರಿಯು ಹುಳಿದ ಕೊಳೆಗೆ
ಅಳಲಿ ಒಳಲಿ ಬಾಯಬಿಟ್ಟು
ನೊಂದು ಬೆಂದು ಬೂದಿಯಾಗಿ ಕಾಣುತಿರುವೆಯ
ಚಂದದಿಂಪು ಸಂದಿತೆಂದು ನಮೆಯುತಿರುವೆಯ

೨

ಕೋಟಿಗೋಟಿಯಂತೆ ಬೇರಿ
ಕೂಟಕೆಲ್ಲ ಸಿಸ್ನ ನವಿಕೆ
ಮಾಟವಾಗಿ ಮೆರೆದು ನಿಂದು

# ಮುಗಿಲು.

ಸೊಬಗಿನಿಂದ ಬೆಳೆದು ಬಂದ ದಿವಸ ಪೋಯಿತೆ
ಜವನ ಜಾತ್ರೆ ಜವದಿಬಂದು ಮೋಸವಾಯಿತೆ

೨

ಮುಳ್ಳಿನಿಂದ ಕೂಡಿಯಿರುವ
ಒಳ್ಳೆ ಹಣ್ಣಿನಿಂದ ಸಿಳ್ಳ-
ಮಿಳ್ಳ ಜಗವ ತಣಿಸಿ ಕುಣಿಸಿ
ಚಲುವಿನಿಂದ ಬೆಳೆವ ಬಾಲರಮೃತವೆಲ್ಲಿವೆ
ತೀಯುವಾಯ್ತು ತಿರಿಗೆ ಬೇರೆತರವದೆಲ್ಲಿವೆ

೩

ಹಕ್ಕಿ ಹರಿಣ ಹಾವುಗಳಿಗೆ
ತಕ್ಕುದಾದ ಇಕ್ಕೆಯನ್ನು
ಮಕ್ಕಳಂತೆ ಸಾಕಿ ಕೊಡಲು
"ನಾಡತಾಯಿ ಬೀಡು" ಎಂದು ಕೂಗಿ ಕಲಿತವೆ
ಕೇಡುಗಾಲ ಬರಲು ತಾವೆಯೋಡಿ ಹೋದವೆ

೪

ಹಲವು ಕಾಲ ಹಲವು ಬಗೆಯ
ಹೊಲವ ಬಳಸಿ ಮಲೆತುನಿಂತು
ಫಲವ ಬೆಳೆಯೆ ಜನರು ನಿನ್ನ
ಸವರಿ ಸವರಿ ಸೋತು ಸೋತು ಸರಿದು ನಿಂತರೈ
ಬವಣೆಯಿಂದ ಕೊಲುವ ಮದ್ದನಿತ್ತು ದಣಿದರೈ

೫

ರಕ್ತಬೀಜ ರಾತ್ರಿಚರನ
ರಕ್ತದಂತೆ ಬಿದ್ದ ಕಡೆಗೆ
ವ್ಯಕ್ತರೂಪದಿಂದಲೇಳೆ
ಮತಿಯು ಹರಿಯದಿರಲು ನರರು ಮೊರೆಯನಿಟ್ಟರೆ
ವ್ಯಥಿತವಾದ ದನಿಯನೆಲ್ಲ ದೇವ ಕೇಳ್ದನೆ

೭

ರೀತಿ ನೀತಿ ತಿಳಿಮನೋಡಿ
ಜಾತಿ ರತ್ನದಂತೆ ದೇವಿ
ಖ್ಯಾತಿಗೊಂಡು ನಡೆಯದಿರಲು
ಪೊಡವಿಯೊಡೆಯ ಸಿಟ್ಟಿನಿಂದೆ ಪಿಡುಗಬಿಟ್ಟನೆ
ಒಡನೆ ಹುಳದ ಗಡಣದಿಂದೆ ಕೊಲೆಯು ನಡಿಸಿತೆ

೮

ಸಿಟ್ಟಿಗೆದ್ದು ದೇವ ಕಷ್ಟ
ಕೊಟ್ಟನೆಂಬ ನಾದ ನುಡಿಯ
ಮಟ್ಟಿಗಿಳಿಯದಿರುವ ಮಾತ
ಮನವೆ ತೂಗಿ ನೋಡೆ ದಯಾಮಯನು ಮಾಳ್ಪನೆ
ಜನಕತಂದೆ "ಅನುವ ತನುವ" ನೋಡದಿರುವನೆ

೯

ಸಾವಿರಾರು ವರುಷದಿಂದೆ
ಧರೆಯ ಬಳಸಿ ಮೆರೆದು ನಿಂದ
ಅರಸುತನದ "ಅರವು ಮರವು"
ಅರಿಯದಂತೆ ಕರಗಿ ಕರಗಿ ಮಾಯವಾಯಿತೆ
ಹಿರಿದೆನಿಪ್ಪ ಸಿರಿಯ ಮರವು ಸರಿದು ಹೋಯಿತೆ

೧೦

ತಾಯಿ ನಿನ್ನ ಬೇನೆಯೇನು
ಬಾಯಿ ಬರದೆ ಪೇಳುವುದಕೆ
ಕಾಯ್ವರಾರೊ ಕೊನೆಯ ಕಾಣೆ
ಯಾವದುಷ್ಟ ಪಿಡುಗು ಬಂದು ಕುಲವ ಕಡಿವುದೈ
ಕಾವನೆಲ್ಲಿ ಇರುವನಯ್ಯೊ ಕುಲವೆ ಕಳೆವುದೈ

೧೧

ಕರ್ಮಭೂಮಿಯಲ್ಲಿ ಬಂದು
ಕರ್ಮವನ್ನು ಮಾಡಿ ನಿಂದು

ಮಾಂಗಿಲು.

ಕರ್ಮದಿಂದ ಹುಟ್ಟಿ ಸಾವ
ತೊಟ್ಟು ಧರೆಗೆ ಬಂದು ಆಡಿಪಾಡಿ ಮಡಿವೆವ್ರೈ
ಬಿಟ್ಟು ಬಿಡದ ಕರ್ಮವನ್ನು ಕಟ್ಟಿ ನಡೆವೆವ್ವೈ

೧೨

ಬರದ ಕಾಲ ಬಂದು ಜನರ
ತರಿದು ತರಿದು ತೂರುತಿರಲು
ಹರಣವುಳಿಸಿ ಪೊರೆವ ತಾಯಿ
ಸಿರಿಯು ತೊರೆದು ಧರೆಯ ತೊರೆದು ಪೋಗುತಿರುವೆಯ
ಮರುಕದಿಂದ ಮನದೆ ನೊಂದು ಹರಣ ತೊರೆವೆಯ

೧೩

ಕಷ್ಟಕಾಲವೊದಗಿ ಬರಲು
ಇಷ್ಟರಾಪ್ತ ಮಿತ್ರರೆಲ್ಲ
ನಿಷ್ಠುರಾಗಿ ನಡೆವರಯ್ಯಾ
ಕಾಲ ಬರಲು ಕಾಲು ತಾನೆ ಕೋಲಿಗೆ ನಿಲುವುದೈ
ಗೆಳೆಯರೆಂಬ ಕೊಳಚೆಯಲ್ಲಿ ಕಳಚಿ ಬೀಳ್ವುದೈ

೧೪

ಪರಮಪುಣ್ಯ ಪರಮಪಾಪಿ
ಧರೆಯನಾಳ್ದ ನರವರೆಲ್ಲ
ಹಿರಿದು ಕಿರಿದು ಪದವಿ ತೊರೆದು
ಕಾಲಗತಿಗೆ ಕಟ್ಟುಬಿದ್ದು ಮಾಯವಾದರೈ
ಕಾಲಬರಲು ಯಾರುತಾನೆ ಜಗದೆ ಉಳಿವರೈ

೧೫

ಅಂಗವೆಲ್ಲ ರೋಗದಿಂದ
ವಿಂಗಡಾಗಿ ಕಳಚಿ ಬೀಳ್ವ
ಸಾಂಗವಾದ ಸಾವ ನೋಡಿ

ಒಡನೆ ದುಗುಡದಿಂದ ಕೂಡಿ ಒಡಲೆಯುರಿಯುವ್ವೈ
ಪೊಡವಿಯಾಣ್ಮನಡಿಯ ಕಂಡು ನುಡಿಯುತಿರುವ್ವೈ

೧೬

ನಿನ್ನ ದುಃಖವೆನ್ನ ತಾಗೆ
ಬನ್ನಬಡುವ ಮನವು ತಾನೆ
ಭಾವಗೀತೆಯಲ್ಲಿ ಮೊಳೆಯೆ
ಕಲಿಸದಿದ್ದ ಕವನ ತಾನೆ ಕಟ್ಟಿಬರುವುದೈ
ಕರುಳಿಗೆಲ್ಲ ತಿಳಿವು ತಾನೆ ಹೊಳೆದು ನಿಲುವುದೈ

೧೭

ಜಗದ ಬಗೆಯ ಬಗೆದು ನೋಡಿ
ಬಗೆದ ದುಗುಡವೆಲ್ಲ ನುಂಗಿ
ಮುಗುಳಿ ಮನವ ಬಿಗಿದು ಬಿಗಿದು
ಇಳೆಗೆ ತಂದು ಜೀವಸತ್ತ್ವ ಕೊರೆಯ ಪಾಡುವ
ಕಳೆವಕಾಯ ಕಳಚಿಬೀಳೆ ಒಲಿದು ಪಾಡುವ

---

## ಮಗಳ ಮೊರೆ.

೧

ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಹಾರೈಸಿ ಕುಳಿತಿಹೆನು ಬೇಗ ಬಾರಮ್ಮ
ಘನವಾದ ಮನೆತನದ ಮನೆಯಲ್ಲಿ ಬಂದೆ
ಮನೆಯವರ ಮನ್ನಣೆಗೆ ಮನೆಯಾಗಿ ನಿಂದೆ
    ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
    ಹಾರೈಸಿ ಕುಳಿತಿಹೆನು ಬೇಗ ಬಾರಮ್ಮ

ಮುಗಿಲು.

೨

ಬಾಲ್ಯದಲಿ ಲಾಲನೆಯ ಪಾಲನೆಯ ಗೆಯ್ದು
ಲೀಲೆಯಿಂದಲಿ ಬೆಳಸಿ ಕಾಲವನು ಕಳೆದೆ
ಹುಲುಸಾದ ಕಲೆಗಳನು ಕಲಿಸಬೇಕೆಂದು
ಕಲೆಗಳಿಗೆ ನೆಲೆಯಾದ ನಿಲಯವನು ತೋರ್ದೆ
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಬಾ ಮನೆಗೆ ಬೇಗದಿಂ ಬಾ ಮುದ್ದು ಗಿಣಿಯೆ

೩

ಪೊಳಲು ಹಳ್ಳಿಗಳೆಂಬ ತಿರುಳಿಲ್ಲ ತಿಳಿದು
ಪೊಳಲನ್ನು ಬಳಸುತ್ತ ಬಳೆಯುತ್ತ ಬಂದೆ
ಕುಲವಧೂಕಾಮಿನಿಯರೊಲವನ್ನು ಕಲಿತು
ಕುಲಶೀಲರೂಪಗಳ ಕಳೆಯನ್ನು ತಿಳಿದೆ
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಬಾ ಮನೆಗೆ ಬೇಗದಿಂ ಬಾ ಮುದ್ದು ಮಗಳೆ

೪

ಮದುವೆಯನು ಹಮ್ಮಾಲು ಮನವನ್ನು ತೆಗೆದೆ
ವಿದುಷಿಮಣಿ ಮಾಡಬೇಕೆನ್ನುತ್ತ ಬಗೆದೆ
ಒಳಿತಾದ ಕಲೆಗಳನು ಕಲಿತಾದ ಬಳಿಕ
ಕೆಳೆಗೊಂಬ ಕುಲಜರನು ಕಾಣಬೇಕೆಂದೆ
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಭಯರಹಿತ ಬಗೆಯಿಂದ ಬಾ ಮಗಳೆ ಬೇಗ

೫

ಶಾರದಾ ಕಾಯಿದೆಯು ಕವಲೊಡೆವ ಮುಂಚೆ
ನೂರಾರು ಲಗುನಗಳ ನೆರೆಯೆಲ್ಲ ನೋಡೆ
ತಂದೆತಾಯ್ಗಳ ತೆರೆದ ಬಂಧುಜನವೆಲ್ಲ
ಬಂಧಿಸಿತು ನನ್ನನ್ನು ಸಂಧಿಸಲು ನಂಟು

# ಮುಗಿಲು.

ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಬೇಗದಿಂ ಬಾರಮ್ಮ ಹಾರೈಸಿ ಇಹೆನು

೧

ವರಸುಧಾರಕನಾಗಿ ಮೆರೆದಿರುವ ನಾನು
ಪರಿಣಯವ ವಿಧಿಸುವೆನೆ ಜವ್ವನದ ಮುಂಚೆ
ಲೇಸಲ್ಲ ಮದುವೆಯಿದು ಮನದಿಂದೆ ಬಗೆದೆ
ಹಾಸಿಗೆಯ. ಹಿಡಿದಿರುವ ಹೆಂಡತಿಯು ಕೇಳ್ದು
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಬೇಗದಿಂ ಬಾರಮ್ಮ ನಮ್ಮಮ್ಮ ನೀನು

೨

ನಾವಿನ್ನು ನೆರೆಗೆಯ್ವ ಮುನ್ನವೆ ನನ್ನ
ಭಾವನೆಯ ಮುಗುಳಾದ ಮಗಳ ಮದುವೆಯನು
ನಮ್ಮಯ್ಯ ದಮ್ಮಯ್ಯ ಹಮ್ಮುವೆನು ಎಂದು
ಮಮ್ಮಾನದಿಂಮುಸಿರಿ ಹಮ್ಮಿದೆನು ನೆರಯ
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಕಳವಳವ ಕಳೆದುಳಿವ ಕತದಿಂದೆ ಬಾರೆ

೩

ಅರಿಯದಿಹ ಮನೆತನಕೆ ಅರಿಯದಿಹ ಜನಕೆ
ಸಿರಿವಂತರೆಂದೆಂಬ ಹಳ್ಳಿ ಮುರುಕರಿಗೆ
ಬಂಧುಗಳು ಬಲವಂತ ಮಾಡಲಾಕ್ಷಣದೆ
ಸಂಧಿಸಿದೆ ಸಂಬಂಧವನು ತಂತಿಮುಖದೆ
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಬಾರಮ್ಮ ತವರೂರ ತಾಯ್ಮನೆಗೆ ನೀನು

೪

ಹೊರಬಾರದೊಜ್ಜೆಯನು ಹೊರಿಸಿದರೆ ನಿನಗೆ
ಉಣಬಾರದುಣಿಸನ್ನು ತಿನಿಸಿದರೆ ನಿನಗೆ

## ಮುಗಿಲು.

ಹೊಲೆತನದ ಮಾತನ್ನು ಕುಲಕೆಲ್ಲ ಬೀಸಿ
ಕುಲವೆಲ್ಲ ಪಾವನವ ಗೆಯ್ದುದೇನಮ್ಮ
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಸಿರಿವನೆಯ ಸರಿಬೇಡ ತಿರಿದುಂಬ ಬಾರೆ

೧೦

ಅತ್ತೆನಾದಿನಿಯರಿಂಗೆ ತುತ್ತಾಗಲಿತ್ತೆ
ಚಿತ್ತಚಂಚಲವಾಗೆ ಬಿತ್ತರಿಸಿಯುತ್ತೆ
ಹುಟ್ಟಿದ್ದು ಕಾಲ್ಮುರಿದು ಹೊಯ್ದು ಗಂಡನಿಗೆ
ನೆಚ್ಚುವವದೆಂತಕಟ ಹಾ ದೇವ! ಎಂದ
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಕಡಲಿಡುವ ಕಂಬನಿಯೊಳಲೆದಾಡಿ ಬಾರೆ

೧೧

ಊರೆಲ್ಲ ನೇರದಿಹ ಸಿರಿವನಿಯ ಸೆರೆಗೆ
ತೂರಿದೆನೆ ನಿನ್ನನ್ನು ಯೋಗಗಾರನಾಗಿ
ವಿಸ್ತೀರ್ಣ ಮರುಕವನು ಮರೆವೆ ನಾನೆಂತು
ದೂರದಿರು ನಮ್ಮವ್ವ ಕಂದವ್ವ ನೀನು
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಚಿತ್ತದಲಿ ಚದುರದಲಿ ಬಾರವ್ವ ನೀನು

೧೨

ವಿಧಿಬರಹಕಿದಿರಾರೆ ಎಂದೆಂಬ ಮಾತು
ಉದಯಿಸದು ಹೃದಯದಲಿ ನಾಗೆಯ್ದ ತಪ್ಪೆ
ಎದುರಾಗಿ ಬರುತಿಹುದು ದುಗುಡದಿಂ ಕೂಡಿ
ಇದಿರಾಗ ಬೇಕಾಯ್ತು ಮಾಡಿದನುಚಿತಕೆ
ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
ಬೇಗದಿಂ ತೊರೆಯವ್ವ ಸಿರಿವನೆಯ ಸೆರೆಯು

೧೩

ಸಂಸ್ಕಾರ ಹೊಂದಿರುವ ಮಗಳನ್ನು ತಂದು
ಸಂಸ್ಕಾರ ಹೊಂದದಿಹ ಮನೆತನಕೆ ನೀಡೆ
ಬರುತಿರುವ ಕಷ್ಟಗಳ ನುಡಿ ಮುಗಿವೆ ಕೇಳ್ವ
ಗುರುತನದ ಗುಣಗಳ ಇತ್ತೆ ನೀನಮ್ಮ
    ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
    ಬಾರಮ್ಮ ಬೇಗದಿಂ ತೊರೆಯುತ್ತ ಸೆರೆಯ

೧೪

ಕಲೆಗಳಿಗೆ ನೆಲೆಯಾದ ಕುಲವಧೂಜನರ
ಕಲೆನೋಡಿ ಕುಲನೋಡಿ ಒಗುಸವನು ಗೆಯ್ದು
ಕುಲವು ಪಾವನವು ಮೇಣ್ ಸಂಸ್ಕೃತಿಯು ಹಿರಿಯು
ಕೊಲೆಯಾಗದುಳಿಯುವನು ನೆಲವಲ್ಲಿ ಬಲಿತು
    ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
    ಬಾರಮ್ಮ ಬೇಗದಿಂ ಕಂದಮ್ಮ ನೀನು

೧೫

ಕೆರೆಬಾವಿ ಕಟ್ಟೆಗಳ ತೀವಿತ್ತು ನೋಡಿ
ಪಿರಿದಾದ ಹರಣವನು ತೊರೆಯುತ್ತೆ ಯೋಚಿಸಿ
ಕರುಣಾಳು ದೇವಂಗೆ ಮೊರೆಯಿಟ್ಟು ನೀನು
ಸೆರೆಯಾಳು ತನದಿಂದ ಮರೆಯಾದೆಯೇನೆ
    ಬಾ ಮಗಳೆ ಬಾ ಮಗಳೆ ಬಾ ಮಗಳೆ ಮನೆಗೆ
    ಧರೆಯನ್ನು ಧರಿಸಿರುವ ದೊರೆಯು ಶಿವನೆಗೆ

೧೬

ಬಂಧುಭಗಿನಿಯರೆಲ್ಲ ಬಿಕ್ಕುತ್ತಲಳಲಿ
ತಂದಿರ್ದ ತಾಯಮ್ಮ ಹಿಂದಾದ ಮಾತ
ಹೊಂದಿಸುತ ಹಲುಬುತ್ತ ನೆಲವನ್ನೆ ಹಿಡಿದು
ಬಂದಿರ್ದ ದಂದುಗವ ನೀಗಿಸುವರಾರೊ

## ಮುಗಿಲು.

ಬಾ ಮುಗಿಲೆ ಬಾ ಮುಗಿಲೆ ಬಾ ಮುಗಿಲೆ ಮನೆಗೆ
ಧರೆಯನ್ನು ಧರಿಸಿರುವ ದೊರೆಯ ಸಿರಿವನೆಗೆ

೧೭

ಸಂಸಾರ ತಿರುವಿನಲಿ ಸಿಲುಕಿರುವ ನಾನು
ಸಂಸಾರ ಸಾಗರವ ಸಾಹಸದೆ ದಾಂಟಿ
ತಿರೆಗಾಗಿ ತಂದಿರುವ ದೊರೆಯ ಚರಣವನು
ಪರಮ ಹರುಷದಿ ಸೇರಿ ಕಾಂಬೆ ನಾ ನಿನ್ನ
ಬಾ ಮುಗಿಲೆ ಬಾ ಮುಗಿಲೆ ಬಾ ಮುಗಿಲೆ ಮನೆಗೆ
ಧರೆಯನ್ನು ಧರಿಸಿರುವ ದೊರೆಯ ಸಿರಿವನೆಗೆ

---

## ನಾಡಕಾಳೆ.

೧

ನನ್ನ ನಾಡ ಚೆನ್ನ ನಾಡ
ಬನ್ನ ಬಡುತ ಪೊರೆಯುವ
ನನ್ನಿಯಿಂದ ತಾಯಿನಾಡ
ಹೊನ್ನ ಸಿರಿಯ ಬೆಳಗುವ

೨

ನಾಡ ಬವರ ಬವಣೆಯಲ್ಲಿ
ಜೀವವನ್ನು ನೀಡುವ
ಹೇಡಿತನವ ಹೊಡೆದು ಹಾಕಿ
ಗೋಷ್ಠಿಯಲ್ಲಿ ಮೆರೆಯುವ

# ಮುಗಿಲು

೧

ನಾಡನುಡಿಯ ನಾಡನಡೆಯ
ನಾಡಿನಲ್ಲಿ ನಡಿಸುವ
ಕಾಡುತಿರುವ ಕಾಡು ಜನರ
ಕೋಡು ತಾನೆ ಉಡಿಯುವ

೨

ನಾಡಮೇಲ್ಮೆ ನೋಡಿಕೊಡಲು
ಪೊಡವಿಯೊಡೆಯನಡಿಯಲಿ
ಬೇಡಿಕೊಂಡು ಪೊಡವಿಗೀವು
ಬಡವರಿಂಗೆ ಬಡಿಸಲಿ

೩

ಚತುರತನದೆ ಜಾತಿಮತದ
ರೀತಿನೀತಿಗೀಸುವ
ಜಾತಿಮತಕೆ ಸೋತುಬಿದ್ದ
ಮಾತೆಯನ್ನು ಎತ್ತುವ

೪

ಜಾತಿಬೆಳಸಿ ಆತುಕೊಂಡು
ಘಾತಿಸಿರ್ಪ ಜನರನು
ಭೀತಿಬಿಡಿಸಿ ಹೂತುಬಿಟ್ಟು
ಸಾತಿಶಯದೆ ಮೆರೆಯುವ

೫

ನನ್ನ ಮಾತು ನಿನ್ನ ಮಾತು
ಹೊನ್ನ ಮಾತದೆನ್ನದೆ
ಉನ್ನತಾಗ್ರಸಭೆಯಮಾತು
ಮನ್ನಿಸೆಲ್ಲ ನಡೆಯುವ

೮

ಕಾವನನ್ನು ಕಾಂಬ ಬಗೆಯು
ಕಾಣೆ ಬೇರೆ ತೆರವಲಿ
ನಾಡ ಸೇವೆಗಾಗಿ ತನುವ
ನೀಡೆ ದೇವ ಕಾಂಬನು

೯

ದೇವರಿಂದ ಬಂದ ನಾವು
ದೇವರಾಗಿ ಮೆರೆಯುವ
ಜೀವಕಂಜಿ ಹೆದರಿ ಬೆದರಿ
ಸಾವ ಜನರ ಕರೆಯುವ

೧೦

ನಾಡಧರ್ಮ ಗೂಢಿಯಲ್ಲಿ
ನಾಡೆ ತಾನೆ ನಡಿಸುವ
ನಾಡದೇವಿ ಬೀಡಿನಲ್ಲಿ
ಕೂಡಿಯಾಡಿ ನೆರೆಯುವ

---

## ಮನಸೂರಿ.

೧

ಡೆಹರಾಡೂನಿನ ತಪ್ಪಲ ಸೀಮೆಯು
ನೇರುತ ಮುಂದಕೆ ತಳೆಯುತಿರೆ
ದರಿಕಂದರಗಳ ಬನಸಿರಿ ಸುರಿಮಳೆ
ಬೆಳಸಿನ ಹೊಲಗಳ ಕಾಣುತಿರೆ

## ಮುಗಿಲು

೧

ಕನಸಿಗೆ ಕಾಣಿಸಿ ಕವನವ ಕಲಿಸುವ
ಮನಸಿನ ಮೈಸಿರಿ ಮುಂಚುತಿರೆ
ತನುವನು ಚಣಚಣ ತೊರೆಯುತ ಮನವೇ
ಹಿಮಗಿರಿ ಸೀಮೆಯ ಮುಸುಕುತಿದೆ

೨

ಕಾಣುವೆನೊಂದೆಡೆ ಕೆಂಪಿನ ಗಿರಿಗಳ
ತರುಗಳ ವಿರಹಿತ ಮುಂದಲೆಯ
ಕಾಣುವೆ ಕಂದರದಿಂಪಿನ ಗಿರಿಗಳ
ತರುಗಳ ಪೂರಿತ ವನಸಿರಿಯ

೩

ಪಾವನ ಗಂಗೆಯ ಜನ್ಮಸ್ಥಳದಿಂ
ಕೇದಾರೇಶ್ವರ ಸೀಮೆಯಲಿ
ಬೆಳ್ಳಿಯ ಬೆಟ್ಟದ ಬೆಳ್ಗೊಡೆ ಕಾಣುತ
ಕನಕರಿಸುತ ನಾ ಮೈಮರೆದೆ

೪

ಕಣ್ಣಾಲಿಗಳಿಂ ಸೋರುವ ನೀರ್ಹನಿ
ಸೀಮೆಯ ಮೀರಿತು ತಾಪದಲಿ
ಕಣ್ಮನವೆಲ್ಲವು ಸುಣ್ಮರೆಯಾದವು
ಹೃದಯದ ದೇವನ ಸೀಮೆಯಲಿ

೫

ಪಣಿನ ಮೇಲೆಯು ಓರೆಗಳಲ್ಲಿಯು
ಪವಡಿಸಿ ಆಡುವ ಮನೆಗಳವು
ಆಟವಿಕನು ತಾ ಮಾಟದೆ ಗೆಯ್ದಿಹ
ಕೋಟಿಯ ಕೊತ್ತಳ ಕೂಟಗಳೊ!!

೭

ಅರಸರ ಸಿಂಗರ ಸಿಂಸರಿಮನೆಗಳು
ದರಿಕಂದರದಲಿ ತೇಲುತಿವೆ
ಪುರುಷ ವಿವರ್ಜಿತ ಸದನಗಳೆಲ್ಲವು
ಕುಳಿರಿನ ಕಾಲವ ಕೂಗುತಿವೆ

೮

ಕೆಳಗಿನ ಸೀಮೆಯ ಸೇರಲು ಧನಿಕರ
ತಂಡವು ಮಿಂಡೆದ್ದೋಡುತಿವೆ
ಸಾರುತ ಬರುತಿಹ ಕುಳಿರಿನ ಕಾಟದೆ
ಜಾರುತಲೊಯ್ಯನೆಯೋಡುತಿವೆ

೯

ಪಾತಾಳದ ಬಿಳಿ ಮಿಶನರಿ ಜನಗಳು
ಭೂತಳ ಶಿಖರದೆ ಚರ್ಚುಗಳ
ಯಾತಕೆ ಕಟ್ಟಿಹರೆಂಬುದ ಕಾಣುವೆ
ಋಷಿಮುನಿ ಜನಗಳ ನಾಡಿನಲಿ

೧೦

ಭಾರತ ವರ್ಷದ ಋಷಿಮುನಿ ಜನಗಳ
ವೈದಿಕ ಧರ್ಮವ ತವೆ ತವಿಸೆ
ಪಾತಾಳದ ವಿಷಭೋಗಿಗಳೆಲ್ಲವು
ನಂಜಿಟ್ಟಾಡುವ ನೆಲವನೆಯೊ

೧೧

ಬೀದಿಯೊಳಲೆಯುತ ಮೋಹವ ಬೀರುವ
ಪಾಶ್ಚಾತ್ಯರುಗಳ ಪಸುಳೆಯರ
ನಲಿನಲಿದಾಡುವ ನಗೆಮೊಗನೋಡಲು
ಪ್ರಾಣವು ವೀಣೆಯೊಳಾಡುತಿದೆ

## ಮುಗಿಲು.

೧೨

ಆಂಗ್ಲರ ನಾಡಿನ ವಿದುಷಿಯರೆನಿಬರೊ
ಬಾಲಿಕ ವಲಯವನಾವರಿಸಿ
ಮೇಳದೆ ತಾಳದೆ ತರೆಯುತ್ತಲೆಯುವ
ಸೊಬಗಿನ ಸೊಂಪದು ಸೂಸುತಿದೆ

೧೩

ಆಂಗ್ಲವಿದುಷಿಯರು ಶಾಲೆಯು ಕೇಳಲು
ಸಿಟ್ಟಿಗೆ ಬಂದಳು ಸಿಡಿದೆದ್ದು
ಮೊರೆತನ ಗರುವಿಕೆ ಗುರುತನವಲ್ಲಿಯು
ನೆರೆ ನೆರೆಗೊಂಬುದು ಧರೆಯಲ್ಲಿ

೧೪

ಆರ್ಯಾವರ್ತದ ಮಹಿಳೆಯರೆನಿಬರೊ
ವೈದಿಕಕಾಲದ ಕುರುಹಿಟ್ಟೊ
ಸರಳತನದ ಸಾಮ್ರಾಜ್ಯದ ಸೂಸುತ
ಬರೆಹದ ಬರೆಸುತ ಬರಿಸುವರು

೧೫

ಚೀನೀ ಜನರೀ ಗಟ್ಟಿಗರೆಂಬೆನು
ಕಾಯುವ ಕಷ್ಟದ ತಡೆವುದಕೆ
ಬೆನ್ನೊಳು ಹೊರೆಯನು ಧರಿಸುತ ಶಿಖರವ
ನೇರುತಲಿರ್ಪುದು ನೋಡುವೆನು

೧೬

ತಲೆಯಾವರಿಸಿಹ ಗುರ್ಜರಜನಂಗಳ
ಜೆಂಕಿಯು ಬಿದಿರಗ್ಗಿಷ್ಟಿಕೆಯು
ಹೊಲಬನು ತಿಳಿಯಲು ತಲೆಯಲ್ಲಾಡಿಸಿ
ಕೇಳಿದೆ ಪಥಿಕರ ಕೌತುಕದೆ

೧೭

ನಗೆನಗೆಯಾಡುತ ಮೊಗವನು ನೋಡುತ
ತಿಳಿಯುವ ಪ್ರಾತಿಂ ಮೂದಲಿಸಿ
ಸಾಗುತ ಕರೆಯುವ ಪಥಿಕರ ನೋಡುತ
ತೊರೆಯದೆ ಪೋಗುವ ದಿಶೆಗಾಗಿ

೧೮

ಹಿಂದು ಜನಾಂಗದ ಜಾತಿಗಳೆಲ್ಲವು
ಸಂದಿದ ನಿಯೋಗ ನಿಯಮವನು
ಇಂದಿಗು ಪಾಲಿಪ ಪರಿಯನು ತಿಳಿಯುತ
ವಿಸ್ಮಿತನಾದೆನು ಮನದಲ್ಲಿ

೧೯

ಓಡುತ ನೋಡಿದೆ ಕಾಂಡಿ ಖರ್ಜೂರವ
"ಸವಿಯರ ತೋಟಲಿನ" ಮಾಟವನು
ಸೈನಿಕ ವೈದ್ಯಾಲಯವನು ನೋಡಿದೆ
ಮಾನವ ಮಮಕಾರಂಗಳನು

೨೦

ಓಡುತ ಡೆಹರಾಡೂನಿನ ಬೀದಿಗೆ
ಸಾರಿದೆ ಸಂಧ್ಯಾಸಮಯದಲಿ
ಪಡುವಣ ನಿಟ್ಟಿದು ನೆರೆ ಸೆರೆಗೊಂಡಿತು
ತಪ್ಪಲದೊಪ್ಪಿನ ಸೀಮೆಯಲಿ

೨೧

ಸಂಧ್ಯಾಕಾಲದ ಸಂಜೆಯಗೆಂಪಿನ
ರಮಣೀಯತೆಯಾ ಒನಪನ್ನು
ಕಮಲಜ ಸೃಷ್ಟಿಯ ಕಮನೀಯತೆಯಾ
ಕೋಡಿನ ಕಣ್ಣಿನೆ ಕಾಣುತಿಹೆ

## ಮುಗಿಲು.

೨೨

ಯಾವುದು ನೋಡಲೊ ಯಾವುದು ಬಿಡಲೋ
ನೋಡುವವೆಲ್ಲವು ನೋಟವದು
ದೇವನ ಮಹಿಮೆಯು ಕಣ್ಗೆ ತೋರುವ
ಹಿಮಗಿರಿ ಸೀಮೆಯು ಮೋಕ್ಷವದು

---

## ನೊಣ.

೧

ಕೆಲಸ ಬೊಗಸೆ ಮುಗಿಸಿ ನಾನು
ಬಯಲಿ ಬೆಳಕ ಬಯಸಿ ನಾನು
ದೇವರೊಲುಮೆಗೆಳಸಿ ನಾನು
ದಿನವು ದಿನವು ಜಗದಲ್ಲಿ ನಡೆಯು ಬಿಡುವೆನು
ಕುಣಿವ ಕಾಲುಮಾನಗಳಿಂದ ತಣಿಯುತಿರುವೆನು

೨

ಮಾನ ಧನದ ಪ್ರಾಣಿಯೊಂದು
ಸೇನೆ ಸೇರಿ ಸಾಗಿ ಬಂದು
ಶಿರದ ಮೇಲೆ ಕೂಡಿಸಿ ನಿಂದು
ಕಿರಿದು ನಾದ ಬೀರಿ ನಮ್ಮ ತರುಬುತಿರುವುದು
ಬರಿದೆ ಜೀವರ ಕೋರಿ ನಾನು ಜೀವರದಿರುವುದು

೩

ಪೈಲು ಪೈಲು ಪೈಲು ಮತ್ತೆ
ಪೈಲಿ ಪೂರ ಮುಗಿಸಿ ನಿಂದೆ

## ಮುಗಿಲು

ನೈಲನಾರ ಬಿಳಿ ಬಂದೆ
ತಲೆಯ ಬಿಳಿ ನಲಿಯುಗಟ್ಟಿ ತೇಲುತಿರುವುದು
ಛಲದ ಹಂಸಪಾದುಗಳನು ಹಾಡುತಿರುವುದು

೪

ಮಾಡಲೇನು ನೊಪ್ಪು ಮೊದಲು
ಸಿಟ್ಟಿನಿಂದ ಬಿಟ್ಟು ಬಿಡದೆ
ಹೆಸು ಸಿತ್ತು ಬಿಟ್ಟಿಗೆಡಿಗೆ
ದೊಟ್ಟಿನಿಂದ ತುಚ್ಛನಾಗಿ ಮುಟ್ಟಿಬರುವುದು
ಬಿಟ್ಟಿ ಬಿಟ್ಟಿ ಬಿರಿ ಬಿರಿಯ ಹೆಚ್ಚಿ ತೋರ್ಪುದು

೫

ಸಿಳ್ಳು ಸಿಳ್ಳು ಬಿಳ್ಳು ಸಿಸ್ಸು
ಘುಳ್ಳಿಸುತಲೇಳಿ ಬರುವ
ಮಿಳ್ಳಿಯಾಗ ಯೋಚನೆಂದು
ಕೊಡೆಯ ಕೊಳಲು ಕೈಯಿನಿಂದ ಕಾಡುತಿರ್ಪನು
ಕದನದಿಂದು ಕಾಲದಂತೆ ತೋರುತಿರ್ಪನು

೬

ಹ್ಯಾಗೆ ಸ್ವಾದಾದಲೇನು
ಪ್ರಾಣ ತೊರೆದ ಬಿಡುಯನರಿಯೆ
ಕ್ಷೋಣಿಯಿಕ್ಕಿ ಏನೆಯ ಕಾಣೆ
ನಾಡಿನಿಂದ ಬಿರದ ನಾನೆ ಮರೆಸುತಿರ್ಪನು
ಕಾಡೆ ಸೀರೆಯ ಬಿಡುಯನರಿಯುತಿರ್ಪನು

೭

ಮೇರು ಸೀಮೆ ನದಿಯು ಕೆರೆ
ಮರಿಯ ಹಾಸ್ಯ ಮನನರಿಯೆ
ಬಿರಿಯ ಕಿರಿಯ ಮಾತದಲ್ಲಿ

# ಮುಗಿಲು.

ಸಗ್ಗ ಸೊಗವು ಬಗ್ಗಿಗೆದರೆ ತನ್ನ ಬಿಸಿಲು
ಸಾರಿ ಮೂರಿ ಪ್ರೀತಿನ ಬಿರಿಯು ಬಾಗಿಸಿದನೆ

೮

ಬಾಸನಾಚೆಸಂಕೆ ನಾನು
ಬಿಳಿ ರಾಷ್ಟ್ರ ಬಿಡಿಸೋಡೆ
ಮಾತ ಬಾರದಳ ದೇವ
ನಾವಮಾಘವಾನದಾ ಬಹೀಬವದಗಳು
ನಾಬಿನಲ್ಲಿ ದೇಬಿತನನ್ನು ಬಿಡುಗೊಂಡಿತು.

೯

ಹಸಿರು ಬಿಳಿ ಹುಲ್ಲು ಬೆಳೆ
ಹಸಿರು ಮಾಡಿ ಹುಲ್ಲಿನಲ್ಲಿ
ಬಡಿಯು ಸಿಗಿಯು ಬಡಿಸು ಬಿಗಿ
ಬಿಸಿಯು ಬಿಸಿಲು ಮಳೆಗೆರೆ ಸಬಿಸಿಪ್ಪುದ್ದನು
ಹಸರು ಹುಸಿರು ಹುಲ್ಲಿನೊಡನೆ ಒಲೆನು ಬರುವನು

೧೦

ಬಡಿಕೆ ಬಿಳ್ಳು ಕಾಲ ಕಡಿಸು
ಬರಾಗಿ ರಕ್ಕೊಡೆಸಿಕದಿರನು
ಗಗನ ಹೊತ್ತು ಬಿಸಿ ಕೆಂಪು
ತನುವ ಸವಿಗೆ ಸಾಬಿನಾಡಿ ಮಾಡಿಪ್ಪಿಸಿ
ಜನಪದಾಸ್ತುಸೇದಂತ ಸಾವ್ರ ಅರಸು

೧೧

ಹರಿಯು ದಕ್ಕತ ಹಾರಿ ಹರಿವ
ಧರೆಯು ಬಿರಿಯು ತರುಣಿಕ್ಕೆ
ಬೇರ ಸರವ ಬಿಡಿಸಿ ಸುಡಿಕೆ
ನಾಡ ಬಿರಿಯು ನಾಡಿನಲ್ಲಿ ಹಾಡಿ ಬರುವ್ವನು
ನಾವ ಬಾಸತನದ ಬೇಡಿ ಹಾಡಿ ಬಿಡುವ್ವನು

# ಅಣಬೆ.

೧

ತನಸು ಬಿರಿಯು ತೀರಿಬರಲು
ಒನಪನಾಂತು ಮೂಡಿ ಬರುವ
ಮನಕೆ ಮಾಟವಾಗಿ ಕಾಂಬ
ಅಣಬೆ ಬೆಳೆವ ಕಳೆಯುತೀರಿ ಹೊಳೆಯುತಿರುವುದು
ತರಳರೊಂದನಲಿವನೊಂದ ತಿಳಿಸುತಿರುವುದು

೨

ಬಾನಸೀರೆ ತೇಲಿಕಾಂಬ
ಬಾನಗೊಡೆಯು ಕೆಳಗೆ ಕಾಣೆ
ಸ್ತೋನೆಗಮಬೆ ಮಾಣಬೆಂದು
ಕಾಂಬಬಿಂಬನೊಂದಿ ಬಾನಹೊಂದಣೆಯು
ಕಾಂಬದಿರ್ದ ಚಂದ್ರಬಿಂಬದಿಂದಣೆಯು

೩

ನೀರನೆಲೆಯು ತೆರೆಯು ಸೋಲಿ
ಸರಿದು ಸರಿದು ಸುಳಿಯುತಿರುವ
ಮರವು ಸಿರಿಯ ತಿರೆಗೆ ತರುವ
ಬರಗಿಸಿರುವ ತೋರಿಯನ್ನ ಕಾಣಿಸುತಿರುವೆಯು
ನಸುಮುದವುಪಬಿತ್ತು ಮನಕೆ ತಣಿಸುತಿರುವೆಯು

೪

ಚಂಚರೀಕತತಿಯುಣಾಂಬೆ
ಮಿಂಚಿನಂಥ ನ್ಯಾಯುಬಿಂಗೆ
ಸಂಚರಿಸದ ಸಂಚನೋಡೆ
ಮೂಸದಿರ್ದ ಪುಷ್ಪವಾಗಿ ನಸುಫೆಗೆಸಿವುದು
ವಾಸನಾಭಿರುಚಿಯು ಜನವ ಮೂಸಿ ತಿಳಿಯದು

## ಮುಗಿಲು

೫

[illegible]
[illegible]
[illegible]
[illegible]
[illegible]

೬

[illegible]
[illegible]
[illegible]
[illegible]
[illegible]

೭

[illegible]
[illegible]
[illegible]
[illegible]
[illegible]

೮

[illegible]
[illegible]
[illegible]
[illegible]
[illegible]

---

೭

ಸನಿಹವೆ ಕಾಣಲು ಕುಣಿಯುವ ಮನದೆ
ಜಿನುಗಿನ ರೇಶಿಮೆ ತಂತುವನಾಂತು
ನುಣುಪಿನ ಸಣ್ಣನೆ ಸಾಣಿಗೆಯೆನಿಸಿ
ವನಗಿರಿಕಂದರ ಹಸುರಲಿಯೆಸೆಯೆ
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೮

ಬೆಳಗಿನ ಗಳಿಗೆಯೊಳಲೆಯುತ ಹೊಲದೆ
ಗಿರಿಗಳನೇರುತ ಶಿಖರದೆ ನೋಡೆ
ಗ್ರಾಮದ ಗೇಹದ ಧೂಮದ ಪರಿಯು
ತರುಗಳ ತುದಿಯಲಿ ತೊನೆಯುತ ತೋಂ
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೯

ಸೂರ್ಯನ ಬಿಸಿಲಿಗೆ ಆಗರ ನೀರು
ಗಾರುಗೆಡುತ ತಾನಾರುತಲಿರಲು
ತೋರುವ ಲವಣದ ಕಣಗಳ ಮಣಿಯು
ಮೆರಸುವ ನೀರಿನ ಹೊಳಪನು ಹೊಳಿಸೆ
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೦

ಸಾಗರ ಸನಿಹದ ಗಜನಿಯ ಬಯಲ
ಹೊಳೆಗಳ ಕೆಲ ಬಲ ಹೊಳೆಯುತಲಿರುವ

ಬೆಳಗುವ ಬೆಳ್ಳಿಯ ಬಟ್ಟಲ ಪೋಲ್ವ
ಸಿಂಪಿನ ಬಿಂಗಿನ ಸೊಂಪನು ಸೂಸಿ
ಸಾಲೆಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೧

ನೀಲಾಂಬರದಾಕ್ರೀಡಾಂಗಣದೆ
ನಲಿನಲಿದಾಡುವ ನಭದಂಗನೆಯು
ಬೆಮರಿನ ಹನಿಗಳನೊರಸುತಕರದ
ವಸನವ ವಸುಧೆಗೆ ಬಿಸುಟಿಹಳೆನಲು
ಸಾಲೆಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೨

ಕಿರಣಾವಳಿಗಳ ಕರುಣವ ಬೀರಿ
ತರಣಿಯು ಮೂಡಣದೆಸೆಯಿಂದೇರಿ
ಮಂಜಿನ ಹನಿಗಳ ಸಂದಣಿಯಿಂದೆ
ವಸುಮತಿ ದಿಶೆಗಳ ಬೆಳಕನು ಬೀರೆ
ಸಾಲೆಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೩

ಸಾಲಿಗ ಜಾಲದ ಮನೆಯೊಳು ಮನವು
ಸೇರುತ ಸರಿಯಲು ಸಯ್ಗೆಟ್ಟಿರಲು
ಕೂಳಿನ ಬಾಳಿನ ಕೋಳಕೆ ಸಿಲುಕಿ
ತಾಳದೆ ನುಸುಳುವ ನರವರನೆಲ್ಲಿ?
ಸಾಲೆಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

# ಮುಗಿಲು.

೭

ಸನಿಹದೆ ಕಾಣಲು ಕುಣಿಯುವ ಮನದೆ
ಜಿನುಗಿನ ರೇಶಿಮೆ ತಂತುವನಾಂತು
ನುಣುಪಿನ ಸಣ್ಣನೆ ಸಾಣಿಗೆಯೆನಿಸಿ
ವನಗಿರಿಕಂದರ ಹಸುರಲಿಯೆಸೆಯೆ
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೮

ಬೆಳಗಿನ ಗಳಿಗೆಯೊಳಲೆಯುತ ಹೊಲದೆ
ಗಿರಿಗಳನೇರುತ ಶಿಖರದೆ ನೋಡೆ
ಗ್ರಾಮದ ಗೇಹದ ಧೂಮದ ಪರಿಯು
ತರುಗಳ ತುದಿಯಲಿ ತೊನೆಯುತ ತೋರೆ
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೯

ಸೂರ್ಯನ ಬಿಸಿಲಿಗೆ ಆಗರ ನೀರು
ಗಾರುಗೆಡುತ ತಾನಾರುತಲಿರಲು
ತೋರುವ ಲವಣದ ಕಣಗಳ ಮಣಿಯು
ಮೆರಸುವ ನೀರಿನ ಹೊಳಪನು ಹೊಳಿಸೆ
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೦

ಸಾಗರ ಸನಿಹದ ಗಜನಿಯ ಬಯಲ
ಹೊಳೆಗಳ ಕೆಲ ಬಲ ಹೊಳೆಯುತಲಿರುವ

## ಮುಗಿಲು.

ಬೆಳಗುವ ಬೆಳ್ಳಿಯ ಬಟ್ಟಲ ಪೋಲ್ವ
ಸಿಂಪಿನ ಬಿಂಗಿನ ಸೊಂಪನು ಸೂಸಿ
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೧

ನೀಲಾಂಬರದಾಕ್ರೀಡಾಂಗಣದೆ
ನಲಿನಲಿದಾಡುವ ನಭದಂಗನೆಯು
ಬೆಮರಿನ ಹನಿಗಳನೊರಸುತಕರದ
ವಸನವ ವಸುಧೆಗೆ ಬಿಸುಟೆಹಳೆನಲು
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೨

ಕಿರಣಾವಳಿಗಳ ಕರುಣವ ಬೀರಿ
ತರಣಿಯು ಮೂಡಣದೆಸೆಯಿಂದೇರಿ
ಮಂಜಿನ ಹನಿಗಳ ಸಂದಣಿಯಿಂದೆ
ವಸುಮತಿ ದಿಶೆಗಳ ಬೆಳಕನು ಬೀರೆ
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೩

ಸಾಲಿಗ ಜಾಲದ ಮನೆಯೊಳು ಮನವು
ಸೇರುತ ಸರಿಯಲು ಸಯ್ಗೆಟ್ಟಿರಲು
ಕೂಳಿನ ಬಾಳಿನ ಕೋಳಕೆ ಸಿಲುಕಿ
ತಾಳದೆ ನುಸುಳುವ ನರವರನೆಲ್ಲಿ?
ಸಾಲಿಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

೧೪

ಪ್ರಣವಾಕ್ಷರವೇ ಮಧ್ಯದೊಳಿರ್ದು
ಅಗಣಿತ ಕಿರಣಾವಳಿಗಳ ಬೀರ್ದು
ಅನಂತ ಸೂರ್ಯನ ತೇಜದ ಕಲೆಯ
ಕುಸುರಿಸಿ ವಸುಧೆಗೆ ತೋರಿಸಿ ಮೆರಿಸ
ಸಾಲೆಯ ನೋಡಲು ಹೋಗುತಲಿರ್ದೆ
ಸಾಲಿಗ ಜಾಲವ ನೋಡುತಲಿರ್ದೆ

---

# ಮುಗಿಲು.

೧

ಏನಿದೇನಿದು ಬಾನಧುನಿಯಲಿ
ಘೋರಗರ್ಜನೆ ಗೆಯ್ವುದು
ಪೊನಲ ನೆಗಸವು ನೆಗೆದು ಬಂದಿರೆ
ಘೂರ್ಣಿಸುವ ಸೌಂರಂಭವೊ
ವನಧಿ ಮೇರೆಯ ಘನರವಂಗಳ ಮಿಕ್ಕಿಮೀರುವ ಮೊಳಗಿದೊ

೨

ಕಾಲಪುರುಷನ ಕಡಕಡಾಟದ
ಸಂಚರಿಪ ಸಂಚಾಲವೊ
ಇಳೆಯನೆಲ್ಲವ ಬಳಸಿಯುಲಿಯುವ
ವಿಲಯ ಕಾಲದ ಕಹಳೆಯೊ
ಇಳೆಯ ಮರ್ತ್ಯರ ಮಸಣಗಾಣಿಪ ಮರಣ ಶಾಸನ ಶಕ್ತಿಯೊ

೩

ಬೊಬ್ಬಿರಿವ ಬಿರುಗಾಳಿ ಗೃಹಗಳ
ಕೋಳ್ಗಳನು ಕೋಳ್ಗೊಳುತಿದೆ

## ಮುಗಿಲು

ಮಂಡಲಾಕೃತಿಯಲ್ಲಿ ಮನೆಗಳ
ಚಂಡೆಸೆದು ಪುಟಿಸುತ್ತಿದೆ
ಬಂಟುಗೆಡದಿಹ ಗಿಡಮರಂಗಳ ದಿಂಡಡಸಿ ಸೈಗೆಡಿಸಿದೆ

೪

ಬಡವರೊಂದೆಡೆ ಗುಡಿಸಲೊಂದೆಡೆ
ಬೊಬ್ಬೆಯಬ್ಬರವೆದ್ದಿದೆ
ಫಡಫಡೆನ್ನುತ ಬಿಡದೆ ಪೊಡವಿಯ
ಪೊನಲು ಪೊಯ್ಯುತ ಪೊರಟಿದೆ
ಜಡರ ಧಾರ್ಷ್ಟ್ಯವ ಜಡಿದು ಜಂಕಿಸಿ ಸಿಡಿಲು ಪಲ್ಗಡಿಯುತ್ತಿದೆ

೫

ಇನಿದು ಗಾನದ ದನಿಯಿದೆಂಬೆನೆ
ತನುಗೆ ತಂಪನು ಸೂಸದು
ಮನವ ತಣಿಸುತ ರಮಿಸಿ ಕುಣಿಸುತ
ಪರಮ ಪುರುಷನ ತೋರದು
ಏನಿದೇನಿದು ಬಾನಧುನಿಯಲಿ ಘೋರ ಗರ್ಜನೆ ಗೆಯ್ವುದು

೬

ಕೋಟಿ ಕೊತ್ತಳ ಕೂಟದಾಟದ
ನಟನೆ ನಡಿಸಿದೆ ನಿಟಿಲೆನೆ
ಆಟವಿಕ ಮಾಯಾ ಪ್ರಪಂಚದ
ಮಾಟನೋಟವ ನಟಿಸಿದೆ
ಲಟಕಟಿಪ ವೀರಾಧಿವೀರರ ಪಡೆಯ ಬೆಡಗನು ಪಡೆದಿದೆ

೭

ಜೀವ ಕೋಟಿಯ ಘಟನೆಪಟಲವ
ವಿಷ್ಣು ಪದದಲಿ ಪದುಳಿಸಿ
ಪವನವಾಹನವಾಗಿಯೇರಿಸಿ
ವಸುಧೆ ದೆಸೆಗಳ ಮುಸುಗಿಸಿ
ಭುವನ ಮಾತ್ರವ ಬವರಯಾತ್ರೆಗೆ ಭರದೆ ಭೋರ್ಗರೆಯುತ್ತಿದೆ

ಮುಗಿಲು.

೮

ಸಿಡಿಲು ಗುಂಡಿನ ಮಿಂಚು ಗಿಡಿಗಳ
ಗಡಣದಿಂದಲಿ ಗಗನದೆ
ಕಡಕಡಾಟದ ಕಸುವ ತೋರಿಸಿ
ಸಮರ ಭೂಮಿಯೊಳಿಸೆಯುತ
ಬಿರುಬು ಗಾಣದ ದೊರೆತನದ ಸಾಮ್ರಾಜ್ಯ ಸೀಮೆಯ ಸೇರಿದೆ

೯

ಬೇಸಿಗೆಯ ಸಾಮ್ರಾಜ್ಯ ಶಿಖರವು
ವಸುಮತಿಯ ಸಂತಾನವ
ನಶಿಸಲಿಸಗುತ ಬಿಸಿಲು ಬೇಗೆಗೆ
ಸುಟ್ಟು ಸೂರೆಯ ಗೊಳುತಿರೆ
ಕಸಿದು ಸಾಮ್ರಾಜ್ಯವನು ಸ್ಥಾಪಿಸೆ ಅಶನಿಪಾತವನೆಸಗಿವೆ

೧೦

ಬೀಡುಗೊಂಡಿಹ ಬಿಸಿಯ ಬೇಸಿಗೆ
ಬೆದರಿ ಬೆಪ್ಪನೆ ಬಾಯ್ಬಿಡೆ
ಗುಡುಗ ಡಂಗುರ ಹೊಯ್ಸಿ ಬಿರುದಿನ
ಹೆದೆಯನೇರಿಸಿ ಸಾರುತ
ಗುಡಿಯ ಕಟ್ಟುತ ಪೊಡವಿಜಡರಿಗೆ ಅದಟದುಬ್ಬಟೆ ತೋರಿವೆ

೧೧

ಪೊಸದು ಹೊಗರಿನ ಹೊಗೆಯು ಗಗನದೆ
ದೆಸೆದೆಸೆಗೆ ಮುಸುಗುತ್ತಿದೆ
ದೆಸೆಯು ಬಳಸುತ ಕೆದರ್ಗಿಡಿಗಳು
ಮಸಗಿ ಮುಂಬರಿಯುತ್ತಿವೆ
ಬಿಸಿಲು ಕಾಲದ ದೊರೆಯ ಬಂಧಿಸಿ ಚಿತೆಯನೇರಿಸಿ ಸುಡುತಿದೆ

೧೨

ಸಿಡಿಲು ಮಡಲಲಿ ಬೆಳಗಿ ಎಲಬನು
ಇಳೆಯ ಜೀವಿಗೆ ತೋರಿದೆ
ಕಡೆಗೆ ಕನಿಕರ ಸೊದೆಯು ಸೂಸಿರೆ
ಮಂಗಳಾಂಗಿಯ ಗಂಗೆಯ
ತಿಳಿಯ ನೀರೊಳು ತೊಳೆದು ತೇಲಿಸಿ ಅಳಲಶ್ರಾದ್ಧವೊಡರ್ಚಿದೆ

೧೩

ನೋಡ ನೋಡದೊ ಒಂದು ನಿಟ್ಟಿಗೆ
ಕರಿಯ ಕಪ್ಪನೆ ಸಾರಿಸಿ
ದಿಶೆಯ ಮೇರೆಯ ವಸುಧೆ ಮೇರೆಯ
ಮುಗಿಲ ಮೇರೆಯ ಮುದುಗಿಸಿ
ತಿಮಿರ ಸಾಯಕದೂರ್ಮಿ ಮಾಲೆಯ ಹೊರಳಿಯೇರುತ ಬರುತಿದೆ

೧೪

ಪಗಲು ರಾತ್ರಿಯ ಯುಗಲ ನೋಡುವ
ಪಗಲ ಕಂಡೆನು ಜನ್ಮದೆ
ಪಗಲಿನಾಣ್ಮನು ಪಗೆಯ ಪರಿದನೊ
ಯುಗವು ಮುಗಿಯಿತೊ ಬೆಳಕಿನ
ಜೋಡಿಯಾಟದ ರೂಢಿ ಪಡೆದಿಹ ಪೊಡವಿಯಾಟವು ಚೋದ್ಯವೆ !

೧೫

ಹಾಯಬಿಟ್ಟಿಹರೇನೊ ಹಡಗಿನ
ಪಡೆಯು ಬೇಗನೆ ಬರುತಿದೆ
ಬಿಳಿಯ ಬಾನಿನ ಕಡಲ ತಡಿಯಲಿ
ಮೊರೆದು ಹಾರುವ ತೆರೆಯನು
ಏರಿಯಿಳಿಯುತ ತೇಲಿತೊನೆಯುತ ಮಿಕ್ಕಿ ಮೀರುತ ಬರುತಿದೆ

೧೬

ಕಂಡೆನೊಂದೆಡೆ ಬೆಳ್ಳಿ ಬೆಟ್ಟಕೆ
ಬೆಳ್ಳಿಯೇರಿಸಿ ಬೆಳಗಿದೆ

## ಮುಗಿಲು.

ತುಂಗಶಿಖರದೆ ಗಂಗೆ ರೂಪದ
ಮಂಗಳಾಂಗಿಯ ಹರಿಸಿದೆ
ಬಿಸಿಲು ಬೆಳಕನು ಕಾಣೆ ಕೋಡೊಳು ಹೊಳೆಯು ಹರಿವುದು ಹೊಸದೆನೆ.

೧೭

ನೀಲಿ ಬಣ್ಣದ ಮುಗಿಲ ಮೇಲ್ಪರೆ
ಹಾರಿ ಹೋಯಿತೆ ರಭಸದೆ
ತೇಲಿಯುಲಿಯುವ ಶಕುನಿ ನಿಕರವು
ತೋರದಿರುವದನಂತದೆ
ಚಲುವ ಬೀರಿಸಿ ನವಿಲ ಬಳಗವನೊಲಿಸಿಲಾಸ್ಯದ ಹೊಳೆಸಿದೆ

೧೮

ನೀಲಿಯಂಬರ ತೆರೆಯ ಪೊರೆಯುಲಿ
ಬೇರೆ ಬೇರೆಯ ರೂಪವ
ಸಾಲುಗೊಳಿಸುತ ರೂಪಿಸಿರಿಸುತ
ಬಣ್ಣವೇರಿಸಿ ಕುಣಿಸುತ
ಇಳೆಯ ನಾಟಕ ಗೃಹವನೆಸಗುತ ಚಲನ ಚಿತ್ರವ ತೋರಿದೆ.

೧೯

ನೋಡದೊಂದೆಡೆ ಸಾರನಾಥದ
ಬುದ್ಧದೇವನ ಸ್ತೂಪವ
ಎದ್ದು ಕಾಣಿಸಿ ಗಗನ ಮುಖದಲಿ
ಸದ್ದು ಮಾಡದೆ ಸಾಗಿಸಿ
ಬುದ್ಧ ದೇವನ ಮಹಿಮೆ ಸಾರಲು ಬದ್ಧಕಂಕಣವಾಗಿದೆ

೨೦

ಮಂಜು ಮಂಜಿನ ಗಡ್ಡೆಯೊಡ್ಡನು
ಗೆಂಟೆನೊಂದೆಡೆ ಮಂಡಿಸಿ
ಮುಂಗುಡಿಯ ಬೆಡಗಿಂದೆ ಕಂಗಳ
ಕಂಗೆಡಿಸಿ ಮುಂಬರಿಯುವ
ಮಂಗಳಾಂಗದ ತುಹಿನಗಿರಿಗಳ ಬಂಬಲದೊಳಿಂಬಿಡಿದಿದೆ

೨೧

ಬಯಲೊಳಲೆಯುತ ಭುವನ ದೇವಿಯ
ದಿವ್ಯದರ್ಶನಕೆಳಸುವೆ
ಶರಧಿ ತೀರದೆ ಹಾರಿ ಮೊರೆಯುವ
ತೆರೆಯ ಸಿರಿಯನು ಕಾಣುವೆ
ಬಯಲ ಭೂಮಿಗೆ ಜಲಧಿಯುಡುಪಿನ ಬಣ್ಣವಿತ್ತವನಾರೆಲೊ !

೨೨

ಜೋಗು ನೀನಿರೆ ಗೇರುಸೊಪ್ಪೆಯ
ಜೋಗವೇ ಜೋಗೆಂಬರೆ ?
ರಾಗವೇರಿದ ಭೋಗ ಭೂಮಿಯ
ಕೋಗಿಲೆಯ ಕೂಗೆಂಬರೆ ?
ಜಗದ ಜೋಗುಗಳೆಲ್ಲ ಬಾಗಿಸಿ ಬೀಗಿ ತೂಗುತ ತೋರಿರೆ

೨೩

ತಂದೆತಾಯ್ಗಳು ತನಯರೇಳ್ಗೆಯ
ಕಂಡು ಹರುಷದೆಯುಲಿವರು
ಕಡಲಿನಾರ್ಭಟೆ ಒಡೆದು ಕೇಳುವ
ಕೆಳೆಯ ಕಾರಣವೇನಿದೆ
ತಂದೆ ತಾಯ್ಗಳ ಬಂಧು ಭಾವವು ನಿನಗೆ ಸಾಗರಕಿರುವುದೆ ?

೨೪

ಸೂರ್ಯನಾರಾಯಣನ ತೇಜವ
ಸೂರೆಗೊಂಡಿಹೆ ನಭದಲಿ
ವೀರತೇಜೋಮಯನ ರುಚಿರವು
ಸೇರಿತೆತ್ತಲೊ ಕಾಣೆನು
ತಿರುವ್ವನೇರಿಸಿ ನೇಸರಿದಿರೊಳು ಬಿರುದು ಬಾವುಲಿ ತೋರುವೆ

೨೫

ಇಳೆಯ ವಲಯವ ಬಳಸಿ ಚಕ್ರದ
ವ್ಯೂಹ ರಚನೆಯ ಗೆಯ್ಯುವೆ

# ಮುಗಿಲು.

ಅಳವಿಗೊಡುತಿಹ ಪಗಲಿನಾಣ್ಮನ
ಇಳಿಕೆಗೆಯ್ದುರೆ ರಣದಲಿ
ಸೆಳೆದು ಬಂಧಿಸಿ ಸೆರೆಯೊಳಿರಿಸುತಲಿಳೆಗೆ ತೋರುವೆಯಿಣುಕಿಸಿ

೨೬

ತಿರೆಯ ಜೀವನದುಸಿರನುಸುರುವ
ಪರಮ ಮೂರುತಿಯಿನನನು
ಸೆರೆಯ ಸರಪಣಿ ಕುಣಿಕೆ ಮಣಿಯಲಿ
ಕುಣಿಸಿ ನೃತ್ಯವನಾಡುವ
ಪರಮ ಪೌರುಷ ದುರುಬತೋರುವ ಸಿರಿಯ ಜೀವನ ಯಾವುದೊ !

೨೭

ಆರು ನೀನೆಲೆ ಪೇಳು ನಿನ್ನಯ
ತಾಣವೆಲ್ಲವ ವಿವರದೆ
ಕೇಳಿ ತಿಳಿಯದ ಕಂಡು ಕಾಣದ
ವೀರ ತನಿರಸಸುಧೆಯಲಿ
ಮಲೆತು ನಿಂತಿಹೆ ಮೆರೆದು ನಿಂತಿಹೆ ಮೀರಿ ನಿಂತಿಹೆ ಜಗದಲಿ

೨೮

ಅರಿದೆನರಿದೆನು ಮೋಡದೊಡೆಯನ
ಬಿರುವಳೆಯ ಭೀಕರಮಿದೊ !
ಧರೆಯ ಸಲಹುವ ಬಿರುದ ತಳೆದಿಹ
ಕರುಣಾಶಾಲಿಯ ಕೆರಳುವ
ಪರಿಯ ಪರಿಕಿಸೆ ಪರಮ ಪುಣ್ಯರ ಪರಮಧಾರ್ಮಿಕತನವಿದೊ !!

೨೯

ಇನನ ಕಿರಣದ ಕರುಣೆಯಿಂದಲಿ
ಅಮರಸರಣಿಯೊಳೇರುವೆ
ಶವನ ಸೃಷ್ಟಿಯ ದಿವಿಜ ಸೃಷ್ಟಿಯ

ವಿಮಲ ನಿಲಯದೆ ಮಲಗುವೆ
ವಿವಿಧ ಬಣ್ಣವ ಬಾನಿಗೇರಿಸಿ ಭುವನ ಮೋಹನವಾಗಿಹೆ

೩೦
ಜನಕನೆಂಬುದ ಗಣನೆಗೆಯ್ಯುತ
ಮಣಿದು ಕಾಣಿಕೆಯಿತ್ತೆಯು
ದಿನಪ ಕೆಡೆನುಡಿಗೆಯ್ಯೆ ತನಯನ
ತನಯತನವನು ನಿಂದಿಸಿ
ಕನಲಿ ಕೊಳುಗುಳದಲ್ಲಿ ತೋಳನು ತೋರಿ ಒಲ್ಸಿರೆಗೆಯ್ದೆಯು

೩೧
ತಂದೆ ತನಯರ ಬಿಂಕದಂಕದ
ಸಂದ ಶೌರ್ಯವ ಧರೆಯಲಿ
ನಿಂದು ನೋಡುವ ಸಂಧಿ ದೊರೆಯಲು
ಮಂದ ಮಾರುತ ಬರುತಲಿ
ಸಂಧಿ ಮಾಡಿಸಿ ಸೆರೆಯ ಬಿಡಿಸಿದ ಚಂಪದಿಂಪನು ಕಂಡೆನು

೩೨
ಭಾನು ಪಡುವಣ ಕಡಲ ತಡಿಯನು
ಸಾರಿ ಸೀಮೆಯ ಸೇರಲು
ಜನಕನಗಲಿಕೆಯಿಂದಮೊಗೆದಿಹ
ಅಳುವು ಸೀಮೆಯ ಮೀರುತೆ
ಮನವನೊಳಕೊಳೆ ಕೆಂಪಿನೊಪ್ಪಿನ ಮುಗಿಲ ಮೊತ್ತದೆ ತೋರುವೆ

೩೩
ಕಾಡನಾಡೊಳು ಬಿಸಿಯ ಬಿಸಿಲೊಳು
ಕಾಡ ಮಿಗಗಳು ನೀರನು
ಬೇಡಿ ಕಾಣದೆ ನಿಶಿಯ ಸಮಯದೆ
ಹಳ್ಳಕೊಳ್ಳವ ಸೇರುತ
ಕುಡಿಯೆ ನೀರನು ಕ್ರೂರ ಬೇಟೆಗ ಹೊಡೆದು ಮಲಗಿಸಲವುಗಳ

# ಮುಗಿಲು.

೩೪

ಕೊಲುವ ಬೇಟೆಗನಡಗಿ ನಿಂತಿರೆ
ಹಳ್ಳಕೊಳ್ಳದ ಬಳಿಯಲಿ
ಬಳಸಿ ಸುಳಿಯೆವು ತಿಳಿಯ ನೀರಿನ
ಬಳಗವೆಲ್ಲವನೊಲ್ಲೆವು
ಎಲವೊ ದೇವನೆ ತ್ರಾಹಿಯೆನುತಿರೆ ಮೇಘರೂಪದೆ ಬಂದೆಯ

೩೫

ಒಸೆದು ಆಗಸ ಸೀಮೆ ತಾಗುತ
ಬಿಳಿಯ ಬೆಳಕನು ಬೀರುತ
ಒಸಗೆವರೆಯನು ಮಸಗಿ ಸಾರುತ
ಬೆಳ್ಳಹಕ್ಕಿಯ ಬಳಗವು
ವಸುಧೆ ದಿಶೆದಿಶೆ ಬೆಸಸಿ ಬರುತಿದೆ ವಿಷಯ ಪೊಸತೆನೆ ಜಗದಲಿ

೩೬

ತಾರೆ ಬಹು ದೂರದಲಿ ಮಿಟುಕಿಸಿ
ಮಿನುಗಿ ಮೇದಿನಿ ಕಾಣ್ದಿರೆ
ಕೊರಗಿ ಕಾದಂಬಿನಿಯು ಮೊರೆಯಿಡೆ
ಕರುಣ ಶಾಲಿಯು ನಿಶೆಯೊಳು
ಧರಣಿಗಟ್ಟಿದ ಅರಿಲಕುಳವೆನೆ ಮಿಂಚುಹುಳಗಳು ಮಿಂಚಿವೆ

೩೭

ಧರೆಯ ಪಾವನ ಪುರುಷ ಬರುತಿರೆ
ಪುರಜನರು ಮೆರೆದಾಡುತ
ಹಿರಿದು ಪೇಡೆಯ ಸಿರವೆ ಕೊಡುವೊಲು
ಎಳೆಯ ಮಕ್ಕಳ ಬಳಗಕೆ
ಆಲಿವರಲಿನ ಸಾಲ ಸೂರೆಯ ತಿರೆಯ ತಳದಲಿ ತೂರಿದೆ

೩೮

ನೀರನೆಲೆಯಾಗಿರುವ ಸಾಗರ
ಜಗದ ವಲಯವ ಬಳಸುತ

ಪಲವು ಕಾಲವು ಸಲಹಿ ನಿಂತಿರೆ
ಇಳೆಯ ಮಕ್ಕಳ ಕಾಣಲು
ನಭವನೇರುತ ನಲಿದು ನೋಳ್ಪುದೊ ಸೂಸಿ ಮುತ್ತಿನ ಸೇಸೆಯ

೩೯

ಗಾಳಿನೀರಿನ ಬಳಕೆ ಬಿಟ್ಟರೆ
ಜೀವಕೋಟಿಯು ಬಾಳ್ವುದೆ
ಬಾಳಿ ಬದುಕುವ ಬಲುಮೆಯಾಂತಿಹ
ಗಾಳಿ ನೀರನು ಬೆರೆತಿಹ
ಜೀವ ಕೋಟಿಯ ಜೀವವೆನಿಸುವ ಕಾಲಕಾಲನು ನೀನೆಲೊ !

೪೦

ನಭದ ಮುಖದಲಿ ವಾಯುವುದಯಿಸೆ
ಅಗ್ನಿಯೊಗೆಯಿತು ಅನಿಲದೆ
ಅಗ್ನಿಯಿಂದಲಿ ಜಲವು ಜನಿಸಿತು
ಜಲದೆ ಪೃಥುವಿಯು ಬಂದುದು
ಇನಿತು ಮಾತನು ಜನಕೆ ಬಣ್ಣಿಸಿ ಕುಣಿವ ಜೀವನ ನೀನಲೆ !

೪೧

ಕೈಗಳಿಲ್ಲದೆ ಕೆಲಸಗೆಯ್ಯುವ
ಪಾದವಿಲ್ಲದೆ ಪೋಗುವ
ನಯನವಿಲ್ಲದೆ ನಾಡೆ ನೋಡುವ
ಕಿವಿಗಳಿಲ್ಲದೆ ಕೇಳುವ
ಹೃದಯವಿಲ್ಲದೆ ಜಗವನರಿಯುವ ಪರಮ ಪುರುಷನು ನೀನಲೆ !

೪೨

ವಿವಿಧ ದೇಸೆಯ ರೂಪ ತೋರಿಸಿ
ಇರದೆ ನಭದಲಿ ಮೆರಯಿಸಿ
ವಿವಿಧ ಜೀವಿಯ ಮೇಣು ರಚಯಿಸಿ

ಮುಗಿಲು.

ನೀರನೊಂದನೆ ಕರೆಯಿಸಿ
ವಿವಿಧ ಸೃಷ್ಟಿಯೊಳಡಕವೊಂದಿದೆ ಎಂಬ ತತ್ವವ ತಿಳುಪುವೆ

೪೩

ದಿವಿಜ ಸದನವ ಭೋಗಿ ಸದನವ
ಮನುಜ ಸದನವದೆನ್ನದೆ
ತವಕಗೊಳ್ಳುತ ಹೊಲಬುಗಾಣುತ
ವಿವಿಧ ಮಾರ್ಗದೆ ತಿರುಗುವೆ
ಸಾಮ್ಯ ಸೃಷ್ಟಿಯೊಳಿಳೆಯ ಸಲಹುತ ಕಾವ್ಯವಸ್ತುವ ಕೊಡುತಿಹೆ

೪೪

ಕರಿಯ ನೀಲಿಯ ಬಿಳಿಯ ಬೂದಿಯ
ಗಾಡಿವಡೆದಿಹ ಮೋಡವು
ಪಾರು ಪರಿಯೊಳು ಪಾರಿ ಹರಿಯುತ
ಒಡನೆಯೆಡೆಯೊಡನಾಡಿಗೆ
ಕರೆದು ಕೊಡುತಲಿ ಸರಿಸು ಬಿಡುತಲಿ ಸಾಮ್ಯಸೃಷ್ಟಿಯ ತೋರ್ಪುದ

೪೫

ತರಳ ತನದಲಿ ತಣಿಸಿ ಕುಣಿಸಿದೆ
ಹರೆಯದಲ್ಲಿಯು ಹರಸಿದೆ
ಹರೆಯು ಹೋಗಲು ನರೆಯು ಹಾಯಲು
ಹುರುಪಿನಿಂದಲಿ ಹಾಡಿಸಿ
ಪರಮ ಪುರುಷನ ಕರುಣ ತೋರುವ ಸಿರಿಯು ಜೀವನ ನೀನಲೆ!

೪೬

ಕಾಲಕಾಲವೆ ನೋಡಿ ಬಂದೆನು
ರೂಪರೂಪಾಂತರವನು
ಜೀವರಾಶಿಯ ಕೋಶ ತೋರಲು
ಜೀವ ಕೋಟಿಯ ನಡೆಯಲಿ
ಕವಿಯ ಕಲ್ಪನೆ ಮೀರಿ ಕಾಲದ ಭೇದಕೊಳಪಡದಿರ

೪೭

ಮುಂಬರಿವ ಮೇಘಂಗಳೆಸಕವೆ
ಇಂಬಿಡದ ಮೇಲಾಟದೆ
ಬೆಂಬಿಡದೆ ಕೂರ್ಗಣೆಯ ಕೆಂಗಿಡಿ
ತನಿಗೆವರ ತೂರುತ್ತಿರೆ
ಸಂಗರದ ಸಾಹಸವು ಸಲ್ಲದು ಸಲಹೆ ಲೋಕವ ತಿಳಿವೆಯು

೪೮

ಗುಡುಗು ಸಿಡಿಲಿನ ತೂರು ಗಿಡಿಗಳ
ಬಿಡಯು ಸೆಟ್ಟನೆ ಬಿಟ್ಟಿಹೆ
ಪಡಿಯ ನೀಡಲು ಜೀವಕೋಟಿಗೆ
ಗಾಡಿಯೊಳು ನೀನೋಡುವೆ
ನೀಡಿ ನೋಡಲು ಶಾಂತಿ ಸಾಮ್ರಾಜ್ಯವನು ವಸುಧೆಗೆ ಬಯಸುವೆ

೪೯

ಇರುವೆ ಎಂಬತು ಕೋಟಿ ಜೀವಿಗೆ
ಪಡಿಯನಳೆಯುವ ಭಾರವು
ಪೊಡವಿಯೊಡೆಯಗೆ ಕೂಡಿಕೊಂಡಿರೆ
ಬಿಡದೆ ಪಡಿಯನು ನೀಡುತ
ಪೊಡವಿ ಜೀವಿಗಳೊಡಲ ಪೊರೆಯುವ ದೇವ ದೂತನು ನೀನೆಲೊ!

೫೦

ಸಾಮ್ಯ ಸಾಮ್ರಾಜ್ಯಗಳ ಸುಖವದು
ಸಹಜ ಸಿಗದಿದೆ ಬಡವಗೆ
ಕಾಮ್ಯವಾಗಿಹ ವಸ್ತು ವಿಸ್ತರ
ಕವಿಯ ಕಲ್ಪನೆಯಾಗಿದೆ
ಸಮರ ಸುಳಿಯೊಳು ಸೌಮ್ಯಮಾರ್ಗವನರಸಿ ಕಾಣದೆ ಕೊರಗುವೆ

೫೧

ಕೊಟ್ಟ ಕಬಳವ ಕಸಿದುಕೊಳ್ಳುವ
ಬಿಟ್ಟಿಯೊಡೆಯರ ಬಳಗವು

ಮುಗಿಲು.

ಮೆಟ್ಟಿ ಬಡವರ ರಕುತ ಹೀರುತ
ಸೃಷ್ಟಿಯೊಟ್ಟಜೆಗೆಡಿಸಲು
ಕಷ್ಟವೆಂಬುದು ಕ್ಷಮೆಗೆ ಸಹಜವು ಬಿಡಿಸ ಬೇಡವೆ ನೀನೆಲೊ?

॥೨

ಕವನ ಸೃಷ್ಟಿಯ ಕುಶಲ ಕಲೆಯನು
ಕಂಗಳಿಂಬೆನೆ ವಿಸ್ತರಿಸಿ
ವಸುಧೆಯೆಲ್ಲವ ಹಸುರು ಮುರಿಯಿಸಿ
ಪಸವ ನೇರಿಸಿ ಪೆರಯಿಸಿ
ವಸುಮತಿಯ ಜೀವಾಳುತನವನು ನಶಿಸದಂದದೆ ಪೊರೆಯುವೆ

॥೩

ಅಡವಿ ಮಲ್ಲಿಗೆ ಗಿಡಗಳಿರದಲಿ
ಕುಡಿಗೊನರ ನಿಡುಮುಡಲಲಿ
ಬಿಡದೆ ಹಿಗ್ಗುತ ವಿವಿಧ ಸುಗ್ಗಿಯ
ಕುಡಿಯ ಮೊಗ್ಗೆಯ ಬಿಡುತಲಿ
ಅಡವಿ ಸೀಮೆಯು ಕರವ ಸೇರಿಸಿ ಬಿರಿದ ಪುಷ್ಪದೆ ಪೊಗಳಿದೆ

॥೪

ದುಂಡು ಮಲ್ಲಿಗೆ ಚಂಡು ಮಲ್ಲಿಗೆ
ಜಾಜಿ ಮಲ್ಲಿಗೆ ಹೂಗಳ
ಕೊಂಡು ಕೈಯೊಳು ದಂಡೆಗಟ್ಟುವ
ಹೊಲದ ಬಾಲೆಯ ಬಯಲಲಿ
ಬಂಡ ನೀಂಟಿದ ಭ್ರಮರದಂದದೆ ಹೊಂದಿಹೊಗಿಸಿಹೆ ಹೂವೊಳು

॥೫

ಎಲ್ಲಿ ನೋಡಿದಡಲ್ಲಿ ಹೊಳೆಗಳ
ಸಲ್ಲಲಿತ ಜಲ ರಾಶಿಯ
ಎಲ್ಲಿ ನೋಡಿದಡಲ್ಲಿ ಹೊಳಪಿನ

## ಮುಗಿಲು.

ಹಸುರು ಹೊಲಗಳ ಪ್ರಸರವ
ಎಲ್ಲಿ ನೋಡಿದಪಲ್ಲಿ ತಾವರೆ ತಳಿಯ ಬೆಳಯಿಸಿ ಮೆರಸಿಹೆ

೫೬

ಪೊನಲ ಪೂರವ ನೇರಿಹಾರುತ
ಹಾರಿ ಬೆರೆಯುತ ನೀರೊಳು
ಸೆಳೆಯ ಮಿಂಚಿನ ಚಳಕ ಕಾಣಿಸಿ
ಹೊಳಪ ತೋರಿಸಿ ಮೆರೆಯುತ
ಹರಿವ ಹಳ್ಳದ ಸಳವ ಸೆಳೆಯುವ ಶಫರಿ ಸಂಚಯ ಮೆರಸಿಹೆ

೫೭

ಬಾರೊ ಬಾರೆಲೊ ಬೇಗ ಮೋಡವೆ
ಮಳೆಯ ತಾರೆಲೊ ಎನ್ನುತೆ
ಬಾಲಕಾಳಿಯು ಕೇಳಿಕಣದಲಿ
ನಲಿದು ನೆಗೆನೆಗೆದುಲಿಯುತ
ಬಲದ ಕಣಗಳು ನಿಂತ ನೆಲೆಯಲಿ ನಗುತ ವೈಯನು ತೊಳೆವುದು

೫೮

ಮುದದಿ ಹನಿಗಳ ನೀನು ನೀಡಲು
ನಿನ್ನಸಿಟ್ಟಿಸಿ ನೆಗೆವರು
ಸದನ ಸೇರುತಲಿಣುಕಿ ನೋಡುತ
ಮೂದಲಿಸಿ ತಾ ಕರೆವರು
ಬದಿಗೆ ಸೇರಿದ ನಿನ್ನ ಕಾಣುತಲಿರದೆ ನೀರೊಳು ನಲಿವರು

೫೯

ಪ್ರಕೃತಿ ದೇವಿಯ ಮಕ್ಕಳೆಲ್ಲರು
ಪ್ರಕೃತಿ ಭಾವದೊಳೆಸೆದಿರೆ
ಸುಕೃತ ಪೂರ್ವಕ ಪಡೆದ ಜನನಿಯು
ಇನಿದು ದನಿಯೊಳು ಬೆದರಿಸೆ
ವಿಕೃತಿ ಹೊಂದಿದ ಬಾಲಮುಖವನು ಮುದ್ದಿ ತಣಿಪುದ ತೋರುವೆ

೬೦

ಸೇವ್ಯ ಸೇವಕ ಭಾವನಳಿಸಿದ
ದಿವ್ಯ ಮೂರುತಿ ನಿನ್ನಯ
ಕಾವ್ಯಮಯ ಸಂಸಾರ ಸಾಗರ
ದೃಶ್ಯ ನಾಟಕ ದೆಡೆಯಲಿ
ದಿವ್ಯ ದರ್ಶನ ದೃಶ್ಯ ತೋರಿದೆ ಕಾವ್ಯಮಯ ಸೀಮಾಂತದೆ

೬೧

ಸಾಗರಂಗಳ ವೇಗಬಾಗಿಸಿ
ಸಾಗಿ ತನುವನು ನೀಗಿಸಿ
ಜಗದ ಜೀವನದಾಗುಹೋಗನು
ತಿರೆಗೆ ತ್ಯಾಗದೆ ತೋರಿಸಿ
ಸಾಗಿ ಹೋಗುವ ಬಗೆಯ ಕಲಿಸಿದೆ ತಿರೆಯ ತಿರುಳನು ತಿಳಿಸಿದೆ!

# ಟಿಪ್ಪಣೆ.

**ಪ್ರಾರ್ಥನೆ**:– ೭– ಕೀಡು (ಧಾ) = ಅಳು.

**ರೈತನ ಗೋಳು** :– ಮಣ್ಣಿನ ಮನುಜ = ಒಕ್ಕಲಿಗ.

**ಮಲೆನಾಡ ಬೆಳವ** :– ೨– ಕಾನು = ಅಡವಿ; ಗಿಡಗಂಟೆಗಳು ತುಂಬಿದ್ದ ಪ್ರದೇಶ. ೨೪– ಆಡಿಕೆ = ಬಿಡುವು, ವಿರಾಮ, ಸೂಟಿ.

**ಪೊಳಲು**:– ೧೨- ಕವಣೆಯ ಜನರು = ಜೋಲಿ ಬಂದಂತೆ ಹೋಗುವ ಜನರು

**ಮುಳ್ಳುಗಳ್ಳಿ** :– ೩– ಸಿಳ್ಳಿ ಮಿಳ್ಳಿ ಜಗವು = ಸಣ್ಣ ಸಣ್ಣ ಮಕ್ಕಳು. " ಸಿಳ್ಳಿ ಮಿಳ್ಳಿ " ಈ ಶಬ್ದವನ್ನು ಒಂದೊಂದು ಕಡೆಯವರು ಒಂದೊಂದು ತೆರನಾಗಿ ಉಪಯೋಗಿಸುವರು.

**ಮನಸೂರಿ** :– ೧೬– ಬಿದಿರಗ್ಗಿಷ್ಟಿಕೆ – ಹಿಮಾಲಯದ ಹಿಮೋತ್ತರ ಪ್ರದೇಶಗಳಲ್ಲಿ ಸಂಚರಿಸುವ ಜನರು ಹಿಮನಿವಾರಣೆಗಾಗಿ ಒಂದು ಬಗೆಯ ಅಗ್ಗಿಷ್ಟಿಗೆಯನ್ನು ಬೆನ್ನಮೇಲೆ ಇಲ್ಲವೆ ತಲೆಯ ಮೇಲೆ ಕಟ್ಟಿಕೊಂಡು ನಡೆಯುವರು. ನಾನು ನೋಡಿದ ಅಗ್ಗಿಷ್ಟಿಯ ಕೆಳಬದಿಯಲ್ಲಿ ಬಿದಿರ ಪಟ್ಟಿಗಳನ್ನು ಜೋಡಿಸಿದ್ದರು. ಅಂತೇ ಬಿದಿರಗ್ಗಿಷ್ಟಿಕೆ ಎಂದು ಬರೆದಿರುವೆನು.

**ಅಣಬೆ** :– ೧– ತನಸು = ತನಿಸು = ತಂಪು.

**ಜೇಡನ ಬಲೆ**:– ೧– ಸಾಲಿಗ= ಜೇಡಹುಳ; ೬– ಆಗರ=ಉಪ್ಪಿನ ಮಾಳ.

೧೧– ಗಜನಿ – ಸಮುದ್ರದ ನೆರೆಯ ಪ್ರದೇಶಗಳಲ್ಲಿಯ ಉಪ್ಪು ನೀರಿನ ಭೂಮಿಗಳಿಗೆ ಕಟ್ಟು ಕಟ್ಟಿ ( ಒಡ್ಡು ಹಾಕಿ ) ಉಪ್ಪು ನೀರು ಒಳಸೇರದಂತೆ ಮಾಡಿ ಬತ್ತದ ಬೆಳೆಯನ್ನು ತೆಗೆದುಕೊಳ್ಳುವ ಭೂಮಿಗೆ " ಗಜನಿ " ಎಂದು ಹೆಸರು.

**ಮುಗಿಲು** :– ೧– ನೆಗಸು = ನೆಗಿಸು = ನೆರೆ, ಪೂರ, ಮಹಾಪೂರ.

೨– ಕೋಳ್ = ಕೋಳು = ಮನೆಯ ಉನ್ನತ ಭಾಗ.

೧೯– ಸಾರನಾಥ = ಬನಾರಸದ ಸಮೀಪದಲ್ಲಿ ಬುದ್ಧದೇವನು ಮೊಟ್ಟಮೊದಲು ಉಪದೇಶ ಮಾಡಿದ ಸ್ಥಳ.

೪೯– ಪಡಿಯುಳಿ = ಅನ್ನಕೊಡು; ದಾನಮಾಡು.